29 January 2026 Thursday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಒಂದಲ್ಲ ಒಂದು ದಿನ ನಮ್ಮ ಜೀವನದ ಪಯಣ ಮುಗಿಯುವುದು ಖಚಿತ!
ಆದರೆ ಯಾವತ್ತು ಯಾವಾಗ, ಎಲ್ಲಿ, ಹೇಗೆ ಜೀವನ ಕೊನೆಗೊಳ್ಳುವುದು ಎನ್ನುವುದು ಮಾತ್ರ ರಹಸ್ಯ!
-ಸ್ನೇಹಾ ಆನಂದ್

info.varthaman@gmail.com


ಕುವೆಂಪು ಸ್ಮಾರಕ ವಿಚಾರ: ಬಜೆಟ್‌ನಲ್ಲಿ ನಿರ್ಧಾರ ಘೋಷಿಸಿ ಪುಟ ಸಂ. 2


ವಿಜೃಂಭಣೆಯಿಂದ ಜರುಗಿದ ಭೀಮನಕೊಲ್ಲಿ ಮಹದೇಶ್ವರ ರಥೋತ್ಸವ ಪುಟ ಸಂ. 4


ಅಂಗಾಂಬುದಿಕೆರೆಗೆ ಸಮಸ್ಯೆ ಇತ್ಯರ್ಥಕ್ಕೆ ಡಿಸಿ ನೇತೃತ್ವದ ಸಭೆ: ಶಾಸಕ ಚಿಟಿಡಿ ಪುಟ ಸಂ. 6

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್
VARTHAMAN Volume: 69 Issue: 85 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

## 25 ಶಾಸಕರ ನಿಗಮ–ಮಂಡಳಿ ಅಧ್ಯಕ್ಷ ಅಧಿಕಾರಾವಧಿ ವಿಸ್ತರಣೆ

**ಬೆಂಗಳೂರು:** ರಾಜ್ಯದ ವಿವಿಧ 25 ನಿಗಮ–ಮಂಡಳಿಗಳ ಅವಧಿ ಪೂರ್ಣಗೊಂಡಿದ್ದ ಅಧ್ಯಕ್ಷರ ಅಧಿಕಾರಾವಧಿಯನ್ನು ಮುಂದು ವರಿಸಿ ಆದೇಶಿಸಲಾಗಿದೆ.

ವಿವಿಧ ನಿಗಮ–ಮಂಡಳಿಗಳಿಗೆ 2024, ಜನವರಿ 26ರಿಂದ 2 ವರ್ಷಗಳ ಅವಧಿಗೆ ಸಚಿವ ಸಂಪುಟ ಸ್ಥಾನಮಾನ ನೀಡಿ 25 ಕಾಂಗ್ರೆಸ್ ಶಾಸಕರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು. ಈಗ ಅಧ್ಯಕ್ಷರ ಅಧಿಕಾರವಧಿ ಅಂತ್ಯವಾಗಿದ್ದರಿಂದ ಗಾದಿ ಕೈತಪ್ಪುವ ಆತಂಕದಲ್ಲಿದ್ದರು. ಆದರೆ, ಈ ಹಿಂದೆ ನೇಮಕ ಆಗಿದ್ದವರನ್ನೇ ಮುಂದುವರಿಸಿ ಸರ್ಕಾರ ಆದೇಶ ಹೊರಡಿಸಿದೆ. ಮುಂದಿನ ಆದೇಶದವರೆಗೆ ಎಂದು ಉಲ್ಲೇಖಿಸಿದೆ. ಹೀಗಾಗಿ ಸಂಪುಟ ಪುನಾರಚನೆಯಾದರೆ ನಿಗಮ ಮಂಡಳಿ ಅಧ್ಯಕ್ಷರಿಗೆ ಮುಂಬಡ್ತಿ ಅಂದರೆ ಸಚಿವ ಸ್ಥಾನ ನೀಡಿ ಹೊಸ ಮುಖಗಳಿಗೆ ನಿಗಮ ಮಂಡಳಿ ನೀಡುವ ಸಾಧ್ಯತೆ ಇದೆ ಎನ್ನಲಾಗಿದೆ.

ಸಚಿವ ಸಂಪುಟದಲ್ಲಿ ಅವಕಾಶ ಸಿಗದ ಶಾಸಕರಿಗೆ ನಿಗಮ ಮಂಡಳಿ ನೀಡಿ ತಲೆ ಸವರಲಾಗಿತ್ತು. ಇನ್ನು ತಮಗೂ ನಿಗಮ ಮಂಡಳಿ ಬೇಕೆಂದು ಪಟ್ಟು ಹಿಡಿದವರೆಗೆ ಇನ್ನುಳಿದ ಅವಧಿಗೆ ಮಾಡೋಣ ಎಂದು ಸಿದ್ದರಾಮಯ್ಯ ಆಶ್ವಾಸನೆ ನೀಡಿದ್ದರು. ಈಗ ಅಂಥವರಿಗೆ ನಿರಾಸೆ ಆದಂತಾಗಿದೆ.

# ವಿಮಾನ ಪತನ: ಅಜಿತ್ ಪವಾರ್ ಸಾವು

## ಮಹಾರಾಷ್ಟ್ರ ಉಪ ಮುಖ್ಯಮಂತ್ರಿ, ಪೈಲಟ್‌ಗಳು ಸೇರಿದಂತೆ ದುರಂತದಲ್ಲಿ ಐವರು ದುರ್ಮರಣ



**ಮುಂಬೈ:** ಮಹಾರಾಷ್ಟ್ರದ ಬಾರಾಮತಿ ಬಳಿ ಬುಧವಾರ ಬೆಳಗ್ಗೆ ಸಂಭವಿಸಿದ ವಿಮಾನ ದುರಂತದಲ್ಲಿ ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಸೇರಿದಂತೆ ಐದು ಮಂದಿ ಮೃತಪಟ್ಟಿದ್ದಾರೆ.

ವಿಮಾನ ಅಪಘಾತದಲ್ಲಿ ಡಿಸಿಎಂ ಅಜಿತ್ ಪವಾರ್, ಭದ್ರತಾ ಅಧಿಕಾರಿ ಜಾಧವ್, ಸಹಾಯಕ ಹಾಗೂ ಪೈಲಟ್ ಕ್ಯಾಪ್ಟನ್ ಶಾಂಭವಿ ಪಾಠಕ್, ಪೈಲಟ್–ಇನ್–ಕಮಾಂಡ್ ಕ್ಯಾಪ್ಟನ್ ಸುಮಿತ್ ಕಪೂರ್ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಅಜಿತ್ ಪರವಾರ್ ಸೇರಿದಂತೆ 5 ಸಿಬ್ಬಂದಿಯನ್ನು ವಿಮಾನ ಹೊತ್ತೊಯ್ಯುತ್ತಿತ್ತು. ಬುಧವಾರ ಬೆಳಗ್ಗೆ 8.30ಕ್ಕೆ ದುರಂತ ಸಂಭವಿಸಿದೆ. ಮುಂಬೈನಿಂದ ಬಾರಾಮತಿಗೆ ತೆರಳುತ್ತಿದ್ದ ವಿಮಾನ ಏರ್‌ಕ್ರಾಫ್ಟ್ ಲ್ಯಾಂಡಿಂಗ್ ಆಗುವ ವೇಳೆ ಬಾರಾಮತಿ ಹೊರವಲಯದ ಹೊಲದಲ್ಲಿ ಅಪಘಾತಕ್ಕೆ ಈಡಾಗಿದೆ. ಉಪಮುಖ್ಯಮಂತ್ರಿ ಅಜಿತ್ ಪವಾರ್ ಸೇರಿದಂತೆ ವಿಮಾನದಲ್ಲಿದ್ದ ಎಲ್ಲಾ 5 ಪ್ರಯಾಣಿಕರು ಸಾವನ್ನಪ್ಪಿದ್ದಾರೆ ಎಂದು ನಾಗರೀಕ ವಿಮಾನಯಾನ ನಿರ್ದೇಶನಾಲಯ ತಿಳಿಸಿದೆ.

ಬಾರಾಮತಿಯಲ್ಲಿ ಅಪಘಾತಕ್ಕೀಡಾದ ವಿಮಾನದ ಬಗ್ಗೆ ಮಾಹಿತಿ ನೀಡಿದ ನಾಗರಿಕ ವಿಮಾನಯಾನ ನಿರ್ದೇಶನಾಲಯ, ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರೊಂದಿಗೆ ಇಬ್ಬರು ಸಿಬ್ಬಂದಿ, ವಿಮಾನದ ಇಬ್ಬರು ಸಿಬ್ಬಂದಿ (ಒಬ್ಬರು ಪಿಎ, ಮತ್ತು 1 ಅಟೆಂಡೆಂಟ್) (ಪಿಐಸಿ+ಎಫ್‌ಒ) ಇದ್ದರು. ವಿಮಾನದಲ್ಲಿದ್ದ ಯಾರೂ ಅಪಘಾತದಲ್ಲಿ ಬದುಕುಳಿದಿಲ್ಲ ಎಂದು ಹೇಳಿದೆ.

ಮುಂಬೈನಿಂದ ಬೆಳಗ್ಗೆ 8.10ಕ್ಕೆ ವಿಮಾನ ಬಾರಾಮತಿ ಕಡೆ ಪ್ರಯಾಣ ಮಾಡಿತ್ತು. ಇನ್ನೇನು ಬಾರಾಮತಿಯಲ್ಲಿ ಲ್ಯಾಂಡಿಂಗ್ ಆಗಬೇಕು ಎನ್ನುವಾಗ ಈ ಅಪಘಾತ ಸಂಭವಿಸಿದೆ. ಸಣ್ಣ ಏರ್‌ಕ್ರಾಫ್ಟ್ ಇದಾಗಿದೆ. ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಮುನ್ನ ಪವಾರ್ ನಾಲ್ಕು ಪುಟ 2ಕ್ಕೆ

### ವಾಚ್, ಬಟ್ಟೆಯಿಂದ ಗುರುತು ಪತ್ತೆ

**ಮುಂಬೈ:** ವಿಮಾನ ಪತನದಿಂದ ಮೃತಪಟ್ಟ ಮಹಾರಾಷ್ಟ್ರ ಡಿಸಿಎಂ ಅಜಿತ್ ಪವಾರ್ ಅವರ ಮೃತದೇಹವನ್ನು ವಾಚ್ ಮತ್ತು ಬಟ್ಟೆಯಿಂದ ಗುರುತಿಸಲಾಗಿದೆ. ಪವಾರ್ ಇದ್ದ ವಿಮಾನ ಬುಧವಾರ ಇಳಿಯಲು ಪ್ರಯತ್ನಿಸಿದಾಗ ಬಾರಾಮತಿ ವಿಮಾನ ನಿಲ್ದಾಣದಲ್ಲಿ ದಟ್ಟವಾದ ಮಂಜು ಮತ್ತು ಕಡಿಮೆ ಗೋಚರತೆ ಇತ್ತು, ಪೈಲಟ್‌ಗೆ ಸರಿಯಾದ ಗೋಚರತೆ ಇಲ್ಲದ ಕಾರಣ ವಿಮಾನ ಪತನವಾಗಿರಬಹುದು ಎಂದು ಪ್ರಾಥಮಿಕ ಪುಟ 2ಕ್ಕೆ

### ಎಎಐಬಿ ತನಿಖೆ ಆರಂಭ

**ಹೈದರಾಬಾದ್:** ಮಹಾರಾಷ್ಟ್ರ ಉಪಮುಖ್ಯಮಂತ್ರಿ ಅಜಿತ್ ಪವಾರ್ ಸೇರಿ ಐವರು ಸಾವಿಗೀಡಾದ ಬಾರಾಮತಿ ವಿಮಾನ ನಿಲ್ದಾಣದಲ್ಲಿ ನಡೆದ ವಿಮಾನ ಅಪಘಾತದ ತನಿಖೆಯನ್ನು ವಿಮಾನ ಅಪಘಾತ ತನಿಖಾ ಬ್ಯೂರೋ (ಎಎಐಬಿ) ನಡೆಸಲಿದೆ.

ದೆಹಲಿ ಮೂಲದ ವಿಎಸ್‌ಆರ್ ವೆಂಚರ್ಸ್ ನಿರ್ವಹಿಸುವ ಲಿಯರ್‌ಜೆಟ್ 46 ವಿಮಾನ ಪುಟ 2ಕ್ಕೆ

### ಭಾರೀ ಪ್ರಮಾಣದ ಬೆಂಕಿ: ಭೀಕರ ದೃಶ್ಯದ ಮಾಹಿತಿ


**ಮುಂಬೈ:** ಮಹಾರಾಷ್ಟ್ರದ ಪುಣೆಯ ಬಾರಾಮತಿ ಸಮೀಪದಲ್ಲಿ ಸಂಭವಿಸಿದ ವಿಮಾನ ಅವಘಡದಲ್ಲಿ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಮೃತಪಟ್ಟಿದ್ದಾರೆ. ಲ್ಯಾಂಡಿಂಗ್ ವೇಳೆ ವಿಮಾನ ಪತನಗೊಂಡಿದೆ. ಅವಘಡ ಕುರಿತಂತೆ ಮಾತನಾಡಿರುವ ಪ್ರತ್ಯಕ್ಷದರ್ಶಿಗಳು ಭೀಕರ ದೃಶ್ಯದ ಬಗ್ಗೆ ಮಾಹಿತಿ ನೀಡಿದ್ದಾರೆ.

ವಿಮಾನ ಪತನದ ದೃಶ್ಯವನ್ನು ನಾನು ಕಣ್ಣಾರೆ ಕಂಡೆ. ಅದು ಅತ್ಯಂತ ನೋವಿನ ಸಂಗತಿ. ವಿಮಾನ ಲ್ಯಾಂಡಿಂಗ್ ವೇಳೆ ಪತನವಾಗಿದೆ. ಕೂಡಲೇ ಹಲವು ಸ್ಫೋಟಗಳು ಸಂಭವಿಸಿದವು. ಭಾರೀ ಪ್ರಮಾಣದ ಬೆಂಕಿ ಆವರಿಸಿತ್ತು. ಕನಿಷ್ಠ ನಾಲ್ಕೈದು ಬಾರಿ ಸ್ಫೋಟದ ಸದ್ದು ಕೇಳಿಸಿತು ಎಂದು ಪ್ರತ್ಯಕ್ಷದರ್ಶಿಗಳು ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಅಪಘಾತದ ಸ್ಥಳಕ್ಕೆ ಆಗಮಿಸಿದ ನಿಲ್ದಾಣದ ಸಿಬ್ಬಂದಿ, ವಿಮಾನದಿಂದ ಜನರನ್ನು ಹೊರತರಲು ಪುಟ 2ಕ್ಕೆ



## ಮೈಸೂರಿನಲ್ಲಿ ಡ್ರಗ್ಸ್ ತಯಾರಿಕೆ ಘಟಕ ಪತ್ತೆ?



**ಮೈಸೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆ ಮೈಸೂರಿನಲ್ಲಿ ಮತ್ತೊಂದು ಡ್ರಗ್ಸ್ ತಯಾರಿಕಾ ಘಟಕ ಪತ್ತೆಯಾಗಿದೆ. ನಗರದ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿ ಡ್ರಗ್ಸ್ ಲ್ಯಾಬ್ ಇರುವ ಶಂಕೆ ವ್ಯಕ್ತವಾಗಿದೆ.


ರಾಷ್ಟ್ರಿಯ ಮಾದಕ ದ್ರವ್ಯ ನಿಯಂತ್ರಣ ಬ್ಯೂರೋ ಹಾಗೂ ಮೈಸೂರು ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಡ್ರಗ್ಸ್ ತಯಾರಿಕಾ ಲ್ಯಾಬ್ ಮೇಲೆ ಬುಧವಾರ ದಾಳಿ ಮಾಡಿದ್ದಾರೆ. ಡ್ರಗ್ಸ್ ತಯಾರಿಕಾ ಲ್ಯಾಬ್ ವಶಕ್ಕೆ ಪಡೆದುಕೊಂಡಿದ್ದಾರೆ.

ಇತ್ತೀಚೆಗೆ ಬೆಂಗಳೂರಿನ ಎನ್‌ಸಿಬಿ ಅಧಿಕಾರಿಗಳ ತಂಡ ಮಾದಕ ದ್ರವ್ಯ ಜಾಲ ಪತ್ತೆಹಚ್ಚಿದ್ದರು. ಆ ವೇಳೆ ಬಂಧಿತರ ಮಾಹಿತಿ ಮೇರೆಗೆ ಮೈಸೂರಿನಲ್ಲಿ ದಾಳಿ ಮಾಡಲಾಗಿದೆ. ಫಿನಾಯಿಲ್ ತಯಾರಿಕಾ ಘಟಕದ ಮೇಲೆ ದಾಳಿ ನಡೆಸಿ ಪರಿಶೀಲನೆ ಮಾಡಲಾಗಿದೆ. ಡಿಟರ್ಜೆಂಟ್, ಸೋಡಾ, ಉಪ್ಪು ಸೇರಿದಂತೆ ಕಚ್ಚಾ ವಸ್ತುಗಳು ಪತ್ತೆ ಆಗಿವೆ. ಆದರೆ, ಮಾದಕ ದ್ರವ್ಯ ಸಿಕ್ಕಿರುವ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ.

ಮೈಸೂರಿನಲ್ಲಿ 2025ರ ಜುಲೈನಲ್ಲಿ ಡ್ರಗ್ಸ್ ತಯಾರಿಕಾ ಘಟಕ ಪತ್ತೆಯಾಗಿತ್ತು. ಮಹಾರಾಷ್ಟ್ರ ಪೊಲೀಸರು ಕಾರ್ಯಾಚರಣೆ ನಡೆಸಿ ಮೈಸೂರಿನ ಹೊರವಲಯದ ರಿಂಗ್ ರಸ್ತೆ ಬಳಿಯ ಎಸ್.ಎಸ್. ನಗರದಲ್ಲಿ ಎಂಡಿಎಂಎ ತಯಾರಿಕಾ ಘಟಕ ಪತ್ತೆ ಮಾಡಿದ್ದರು. ಈ ದಾಳಿ ವೇಳೆ 100 ಕೋಟಿಗೂ ಅಧಿಕ ಮೌಲ್ಯದ ಸುಮಾರು 50 ಕೆ.ಜಿ ಎಂಡಿಎಂಎ ವಶಪಡಿಸಿಕೊಳ್ಳಲಾಗಿತ್ತು.

## ಸಿಎಂ ಸಿದ್ದರಾಮಯ್ಯಗೆ ಬಿಗ್ ರಿಲೀಫ್

### ಲೋಕಾಯುಕ್ತ ಸಲ್ಲಿಸಿದ್ದ ಬಿ ರಿಪೋರ್ಟ್ ಒಪ್ಪಿದ ಕೋರ್ಟ್



**ಬೆಂಗಳೂರು:** ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಅಕ್ರಮ ನಿವೇಶನ ಹಂಚಿಕೆ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಕೋರ್ಟ್ ಬಿಗ್ ರಿಲೀಫ್ ನೀಡಿದೆ.

ಪ್ರಕರಣದಲ್ಲಿ ಲೋಕಾಯುಕ್ತ ನೀಡಿದ್ದ ಬಿ ರಿಪೋರ್ಟ್ ಅನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಒಪ್ಪಿದೆ. ಇದರೊಂದಿಗೆ ಸಿದ್ದರಾಮಯ್ಯ ಅವರು ಕಳಂಕಮುಕ್ತರಾದಂತೆ ಆಗಿದೆ ಸಿಎಂ ಪರ ಕಾನೂನು ಹೋರಾಟಕ್ಕೆ ಜಯ ಸಿಕ್ಕಂತಾಗಿದೆ. ಮುಡಾ ಹಗರಣದ ಆರೋಪಿಗಳಾಗಿದ್ದ ಸಿದ್ದರಾಮಯ್ಯ, ಪತ್ನಿ ಪಾರ್ವತಿ, ಸಿಎಂ ಭಾಮೈದ ಮಲ್ಲಿಕಾರ್ಜುನ ಸ್ವಾಮಿ ಮತ್ತು ದೇವರಾಜು ಅವರಿಗೆ ಕೋರ್ಟ್ ತೀರ್ಪಿನಿಂದ ಬಿಗ್ ರಿಲೀಫ್ ಸಿಕ್ಕಿದೆ. ಉಳಿದ ಆರೋಪಿಗಳ ವಿರುದ್ಧ ತನಿಖೆ ಮುಂದುವರಿಸುವಂತೆ ಕೋರ್ಟ್ ಬುಧವಾರ ಆದೇಶ ನೀಡಿದೆ.

ಲೋಕಾಯುಕ್ತ ಪೊಲೀಸರು ಮುಖ್ಯಮಂತ್ರಿ ಸಿದ್ದರಾಮಯ್ಯ, ಪತ್ನಿ ಪಾರ್ವತಿ ಸೇರಿ ನಾಲ್ವರ ವಿರುದ್ಧ ಬಿ–ರಿಪೋರ್ಟ್ ಸಲ್ಲಿಸಿದ್ದರು. ಈ ಬಿ–ರಿಪೋರ್ಟ್ ಪ್ರಶ್ನಿಸಿ ದೂರುದಾರ ಸ್ನೇಹಮಯಿ ಕೃಷ್ಣ ಕೋರ್ಟ್ ಮೆಟ್ಟಿಲೇರಿದ್ದರು. ವಾದ ಆಲಿಸಿದ ನ್ಯಾಯಾಲಯ ಬಿ–ರಿಪೋರ್ಟ್ ಅಂಗೀಕರಿಸಿದೆ. ನಾಲ್ವರು ಸಿದ್ದರಾಮಯ್ಯ (A1), ಪಾರ್ವತಿ (A2), ಮಲ್ಲಿಕಾರ್ಜುನ ಸ್ವಾಮಿ (A3), ದೇವರಾಜು (A4) ಅವರನ್ನು ದೋಷಮುಕ್ತ ಗೊಳಿಸಿದೆ. ಉಳಿದ ಆರೋಪಿಗಳ ವಿರುದ್ಧ ತನಿಖೆ ಮುಂದುವರಿಸುವಂತೆ ಸೂಚಿಸಿದೆ.

ಇದಕ್ಕೂ ಮುನ್ನ ವಿಚಾರಣೆ ನಡೆಸಿದ್ದ ಕೋರ್ಟ್, ಈ ಹಿಂದೆ ಲೋಕಾಯುಕ್ತ ಪೊಲೀಸರು ಸಾಕಷ್ಟು ದೋಷಾರೋಪ ಪಟ್ಟಿ ಹಾಕಿದ್ದಾರೆ. ಆದರೆ ಯಾಕೆ ಅಂತಿಮ ವರದಿ ಸಲ್ಲಿಕೆ ಮಾಡುತ್ತಿಲ್ಲ ಎಂದು ನ್ಯಾಯಾಧೀಶರು ಪ್ರಶ್ನಿಸಿದ್ದರು. ಇದಕ್ಕೆ ಉತ್ತರಿಸಿದ ಲೋಕಾಯುಕ್ತ ವಿಶೇಷ ಸರ್ಕಾರಿ ಅಭಿಯೋಜಕ, ಈಗಾಗಲೇ ಅಂತಿಮ ವರದಿ ಪುಟ 2ಕ್ಕೆ

## ಫೋನ್ ಟ್ಯಾಪಿಂಗ್: ಕಾವೇರಿದ ಚರ್ಚೆ

### ಸದನದಲ್ಲಿ ವಿಪಕ್ಷಗಳ ಆರೋಪಕ್ಕೆ ಸಿಎಂ ಸಿದ್ದರಾಮಯ್ಯ ಉತ್ತರ



**ಬೆಂಗಳೂರು:** ರಾಜ್ಯಪಾಲರಿಗೆ ಕೇಶವ ಕೃಪಾದಿಂದ ಫೋನ್ ಬರುತ್ತದೆ ಎಂಬ ಕಾನೂನು ಸಚಿವ ಎಚ್.ಕೆ. ಪಾಟೀಲ್ ಹೇಳಿಕೆ ವಿಧಾನಸಭೆ ಅಧಿವೇಶನದಲ್ಲಿ ಬುಧವಾರ ವಿವಾದಕ್ಕೆ ಕಾರಣವಾಯಿತು. ಇದಕ್ಕೆ ಬಿಜೆಪಿ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಹಾಗಾದರೆ ನೀವು ಆರ್‌ಎಸ್‌ಎಸ್ ಕಚೇರಿಯ ಫೋನ್ ಟ್ಯಾಪಿಂಗ್ ಮಾಡ್ತಿದ್ದೀರಿ. ರಾಜ್ಯಪಾಲರ ಕಚೇರಿಯ ಫೋನ್ ಟ್ಯಾಪಿಂಗ್ ಪ್ರೂವ್ ಮಾಡಿದ್ದಾರೆ. ಇದು ಫೋನ್ ಟ್ಯಾಪಿಂಗ್ ಸರ್ಕಾರನಾ ಎಂದು ವಿಪಕ್ಷ ನಾಯಕ ಆರ್.ಅಶೋಕ್ ವಾಗ್ದಾಳಿ ನಡೆಸಿದರು.

ರಾಜ್ಯಪಾಲರಿಗೆ ಕೇಂದ್ರ ಗೃಹಸಚಿವ ಕರೆ ಮಾಡಿರುವ ಆರೋಪದ ಕುರಿತು ವಿಧಾನಸಭೆಯಲ್ಲಿ ಪ್ರಸ್ತಾಪಿಸಿದ ಆರ್ ಅಶೋಕ್, ನಮ್ಮ ಫೋನ್‌ಗಳನ್ನು ಕೂಡ ಟ್ಯಾಪಿಂಗ್ ಮಾಡುತ್ತಿದ್ದಾರೆ. ಹಿಂದೆ ಫೋನ್ ಟ್ಯಾಪಿಂಗ್ ಮಾಡಿದ್ದ ಸರ್ಕಾರಗಳು ಬಿದ್ದು ಹೋಗಿವೆ. ಕಾನೂನು ಸಚಿವರಾಗಿದ್ದೀರಿ, ರಾಜ್ಯಪಾಲ ಓಡಿ ಹೋದರು ಎಂದರೆ ನೀವು ಕಾನೂನು ಸಚಿವ ಆಗಿರೋದೆ ಸದನಕ್ಕೆ ಅಗೌರವ. ಸದನದಲ್ಲಿ ಸುಳ್ಳು ಹೇಳಿ, ಈಗ ಸಮರ್ಥನೆ ಮಾಡಲು ಮತ್ತಷ್ಟು ಸುಳ್ಳು ಹೇಳುತ್ತಿದ್ದೀರಿ. ಕಡತದಿಂದ ಹೆಚ್.ಪಾಟೀಲ್ ಹೇಳಿಕೆಯನ್ನು ತೆಗೆದುಹಾಕಲಿ, ಇಲ್ಲ ಅಂದರೆ ಕರೆ ಮಾಡಿರುವುದಕ್ಕೆ ದಾಖಲೆ ಕೊಡಿ. ಹೆಚ್.ಕೆ ಪಾಟೀಲ್ ಕ್ಷಮೆ ಕೇಳಬೇಕು ಎಂದು ಆರ್.ಅಶೋಕ್ ಒತ್ತಾಯಿಸಿದ್ದಾರೆ.


ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ. ನಮ್ಮ ಸರ್ಕಾರ ಯಾರದೇ ದೂರವಾಣಿ ಕದ್ದಾಲಿಸುವುದಿಲ್ಲ. ನಾವು ವಿರೋಧ ಪಕ್ಷಗಳ ನಾಯಕರ ಫೋನ್ ಟ್ಯಾಪ್ ಮಾಡಿಲ್ಲ. ಕೇಂದ್ರದಿಂದ ಕರೆ ಬಂದಿರಬಹುದು ಎಂದು ಹೇಳಿದ್ದಾರೆ ಅಷ್ಟೇ ಎಂದರು.

ಗವರ್ನರ್ ಭಾಷಣದ ಮೇಲೆ ಮಾತಾಡಬೇಕು ಅಂದರೆ ಮಾತಾಡಿ, ಸುಮ್ಮನೆ ಕಾಲಹರಣ ಮಾಡಲು ಚರ್ಚೆ ಮಾಡಬೇಡಿ. ಬೇಕು ಎಂದರೆ ತನಿಖೆ ಪುಟ 2ಕ್ಕೆ

## ಬೀದರ್‌ನಲ್ಲಿ ಲಘು ಭೂಕಂಪನ, ಆತಂಕ

**ಬೀದರ್:** ಜಿಲ್ಲೆಯ ಹುಚುಕನಹಳ್ಳಿಯಲ್ಲಿ ಹಾಗೂ ಸೀರಕಟಹಳ್ಳಿಯಲ್ಲಿ 1.8 ತೀವ್ರತೆಯ ಲಘು ಭೂಕಂಪನ ಸಂಭವಿಸಿದೆ. ಗ್ರಾಮಸ್ಥರು ಆತಂಕಗೊಂಡಿದ್ದಾರೆ. ಬುಧವಾರ ಮಧ್ಯಾಹ್ನ 1.34ರ ಸುಮಾರಿಗೆ ಭೂಕಂಪನ ಸಂಭವಿಸಿದೆ. ರಿಕ್ಟರ್ ಮಾಪಕದಲ್ಲಿ 1.8 ತೀವ್ರತೆ ದಾಖಲಾಗಿದೆ. ಬೀದರ್ ತಾಲೂಕಿನ ರಂಜೋಲಖೇಣಿ ಜಿಪಿಯ ಹುಚುಕನಹಳ್ಳಿಯ ಪುಟ 2ಕ್ಕೆ

## ಪ್ರವಾಸಿ ಬೋಟ್ ದುರಂತ: ಮತ್ತೊಬ್ಬ ಯುವತಿ ಸಾವು



**ಉಡುಪಿ:** ಇಲ್ಲಿನ ಡೆಲ್ಟಾ ಬೀಚ್‌ನಲ್ಲಿ ನಡೆದಿದ್ದ ಪ್ರವಾಸಿ ಬೋಟ್ ದುರಂತದಲ್ಲಿ ಅಸ್ವಸ್ಥಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಯುವತಿ ದಿಶಾ ಚಿಕಿತ್ಸೆ ಫಲಿಸದೆ ಬುಧವಾರ ಸಾವಿಗೀಡಾಗಿದ್ದಾರೆ.

ಮೈಸೂರಿನ ಉದಯಗಿರಿ ಜಲಾಪುರಿ ನಿವಾಸಿ ಪುಟ 2ಕ್ಕೆ

## ರಾಜಕಾರಣಿಗಳು ಹುಷಾರಾಗಿರಿ: ಡಿಕೆಶಿ



**ಬೆಂಗಳೂರು:** ಅಜಿತ್ ಪವಾರ್ ಅವರ ಸಾವು ಆಘಾತಕಾರಿ. ಅವರ ಸಾವಿನ ಸುದ್ದಿ ಕೇಳಿ ನನಗೂ ಗಾಬರಿಯಾಯಿತು. ರಾಜಕಾರಣಿಗಳಾದ ನಾವುಗಳು ಅತ್ಯಂತ ಎಚ್ಚರಿಕೆಯಿಂದ ಇರಬೇಕು. ಪ್ರಯಾಣ ಮಾಡುವಾಗ ಹುಷಾರಾಗಿ ಇರಬೇಕು. ಹೀಗೆ ಅನೇಕ ನಾಯಕರನ್ನು ನಾವು ಕಳೆದುಕೊಂಡಿದ್ದೇವೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

ಸದಾಶಿವನಗರದ ನಿವಾಸದ ಬಳಿ ಬುಧವಾರ ಮಾಧ್ಯಮಗಳಿಗೆ ಡಿ.ಕೆ.ಶಿವಕುಮಾರ್ ಪ್ರತಿಕ್ರಿಯೆ ನೀಡಿದರು. ಅತ್ಯಂತ ಪ್ರಗತಿಪರ ಆಲೋಚನೆ ಹೊಂದಿದ್ದಂತಹ ನಾಯಕ ಅಜಿತ್ ಪವಾರ್ ಅವರು. ಎಲ್ಲಾ ಕೆಲಸಗಳಿಗೂ ಸಹಕಾರ ಕೊಡುತ್ತಿದ್ದರು ಎಂದು ಮೊನ್ನೆಯಷ್ಟೇ ಮಹಾರಾಷ್ಟ್ರ ಮುಖ್ಯಮಂತ್ರಿಯವರು ಹೇಳಿದ್ದರು. ಅವರ ಆತ್ಮಕ್ಕೆ ಶಾಂತಿ ದೊರಕಲಿ. ಅವರ ಕುಟುಂಬ ವರ್ಗ ಹಾಗೂ ಬೆಂಬಲಿಗರಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ಆ ಭಗವಂತ ನೀಡಲಿ. ಅವರ ಕುಟುಂಬಸ್ಥರು ಬೆಂಗಳೂರಿನಲ್ಲೂ ನೆಂಟಸ್ಥಿಕೆ ಬೆಳೆಸಿದ್ದಾರೆ. ಮಂಗಳವಾರ ಅವರ ಸಂಬಂಧಿಕರನ್ನು ಭೇಟಿಮಾಡಿದ್ದೆ ಎಂದರು.

ಇತ್ತೀಚೆಗೆ ಹೆಚ್ಚು ವಿಮಾನ ಪುಟ 2ಕ್ಕೆ

## ಮೃಗಾಲಯದ ಜಿರಾಫೆ ಸಾವು

**ಮೈಸೂರು:** ಮೈಸೂರು ಮೃಗಾಲಯದ ಪ್ರಮುಖ ಆಕರ್ಷಣೆಯಾಗಿದ್ದ ಸುಮಾರು 25 ವರ್ಷದ ಜಿರಾಫೆ ಯುವರಾಜ ವೃದ್ಧಾಪ್ಯದಿಂದ ಬೆಳಗ್ಗೆ ಸಾವನ್ನಪ್ಪಿದೆ. 1987ರಲ್ಲಿ ಜರ್ಮನಿಯಿಂದ ತಂದ ಹೆನ್ರಿ ಮತ್ತು ಹನಿ ಜಿರಾಫೆಗಳಿಗೆ 9ನೇ ಮರಿಯಾಗಿ 2001ರಲ್ಲಿ ಯುವರಾಜ ಜನಿಸಿದ್ದ. ಮೃಗಾಲಯದಲ್ಲಿ ಹೆಚ್ಚು ವರ್ಷ ಅಂದರೆ 25 ವರ್ಷಗಳ ಕಾಲ ಬದುಕಿದ ಜಿರಾಫೆ ಇದಾಗಿದೆ. ಹನಿ ಮತ್ತು ಹೆನ್ರಿ ಜಿರಾಫೆಗಳಿಗೆ ಜನಿಸಿದ ಕೃಷ್ಣರಾಜ, ಚಾಮರಾಜ, ನರಸಿಂಹರಾಜ ಮತ್ತು ಯುವರಾಜ ಜಿರಾಫೆಗಳಲ್ಲಿ ಈವರೆಗೆ ಬದುಕಿದ ಜಿರಾಫೆ ಯುವರಾಜ ಜಿರಾಫೆ.



## ಅಜಿತ್ ಸಾವು ಅನುಮಾನ: ತನಿಖೆಗೆ ಮಮತಾ ಆಗ್ರಹ



**ಮುಂಬೈ:** ವಿಮಾನ ದುರಂತದಲ್ಲಿ ಮಹಾರಾಷ್ಟ್ರ ಡಿಸಿಎಂ ಅಜಿತ್ ಪವಾರ್ ಸಾವಿನ ಕುರಿತು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಕಳವಳ ವ್ಯಕ್ತಪಡಿಸಿದ್ದಾರೆ. ವಿಮಾನ ಪತನ ಪ್ರಕರಣವನ್ನು ಉನ್ನತಮಟ್ಟದ ನ್ಯಾಯಾಂಗ ತನಿಖೆಗೆ ವಹಿಸಬೇಕೆಂದು ಆಗ್ರಹಿಸಿದ್ದಾರೆ.

ಅಜಿತ್ ಪವಾರ್ ಸಾವಿನ ಕುರಿತು ಮಾತನಾಡಿರುವ ಅವರು, ಅಜಿತ್ ಪವಾರ್ ಎನ್‌ಡಿಎ ತೊರೆದು ಇಂಡಿಯಾ ಒಕ್ಕೂಟ ಸೇರಬೇಕಿತ್ತು. ಅಜಿತ್ ಎನ್‌ಡಿಎ ಒಕ್ಕೂಟ ತೊರೆಯುವ ಮಾತುಗಳು ದಟ್ಟವಾಗಿತ್ತು. ಈಗ ಏನಾಗಿದೆ ನೋಡಿ? ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ಉನ್ನತಮಟ್ಟದ ತನಿಖೆ ನಡೆಯಬೇಕೆಂದು ನಾನು ಒತ್ತಾಯಿಸುತ್ತೇನೆ. ಅಪಘಾತ ಹೇಗೆ ಸಂಭವಿಸಿತು ಅನ್ನೋದು ಗೊತ್ತಾಗಬೇಕು ಎಂದು ಹೇಳಿದ್ದಾರೆ.

ಮಮತಾ ಮಾತಿಗೆ ದನಿಗೂಡಿಸಿರುವ ಆಪ್ ನಾಯಕಿ ಸೋಮನಾಥ್ ಭಾರ್ತಿ, ಪವಾರ್ ಅವರ ಸಾವು ಅಪಘಾತವೇ ಅಥವಾ ವಿಧ್ವಂಸಕ ಕೃತ್ಯವೇ? ಎಂದು ಪ್ರಶ್ನೆ ಮಾಡಿದ್ದಾರೆ. ವಿಮಾನ ದುಂತರದಲ್ಲಿ ಡಿಸಿಎಂ ಅಜಿತ್ ಪವಾರ್ ಅವರ ಸಾವಿನ ಸುದ್ದಿ ತಿಳಿದು ಆಘಾತವಾಯಿತು. ಮಹಾರಾಷ್ಟ್ರ ಪುರಸಭೆ ಚುನಾವಣೆಯಲ್ಲಿ ಅಜಿತ್ ಪವಾರ್ ಅವರ ಬಣ ಶರದ್ ಪವಾರ್ ಅವರ ಬಣದೊಂದಿಗೆ ಮೈತ್ರಿ ಮಾಡಿಕೊಂಡಿತ್ತು. ಹೀಗಾಗಿ ಎರಡೂ ಬಣಗಳು ಮತ್ತೆ ವಿಲೀನಗೊಳ್ಳಬಹುದು ಎನ್ನಲಾಗಿತ್ತು. ಇದು ಬಿಜೆಪಿ–ಶಿವಸೇನೆ (ಶಿಂಧೆ ಬಣ) ಸರ್ಕಾರವನ್ನು ತೊಂದರೆಗೊಳಿಸುತ್ತಿತ್ತು. ಅಷ್ಟರಲ್ಲೇ ಅಪಘಾತ ಸಂಭವಿಸಿರುವುದರಿಂದ ಅನುಮಾನ ಮೂಡಿಸಿದೆ. ಇದು ಅಪಘಾತವೋ ಅಥವಾ ವಿಧ್ವಂಸಕ ಕೃತ್ಯವೋ ಅನ್ನೋದನ್ನ ತನಿಖೆ ಮಾಡಬೇಕು ಎಂದು ಒತ್ತಾಯಿಸಿ ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ.

ರಾಜಸ್ಥಾನ ಕಾಂಗ್ರೆಸ್ ಅಧ್ಯಕ್ಷ ಗೋವಿಂದ್ ಸಿಂಗ್ ದೋತಾಸ್ರಾ ಕೂಡ ಪವಾರ್ ಸಾವಿನ ಬಗ್ಗೆ ತನಿಖೆ ನಡೆಸಬೇಕೆಂದು ಒತ್ತಾಯಿಸಿದ್ದಾರೆ. ಮೊದಲು ವಿಜಯ್ ರೂಪಾನಿ ಜಿ ಅವರ ವಿಮಾನ ಅಪಘಾತ, ಅದಕ್ಕೂ ಮುನ್ನ ಬಿಪಿನ್ ರಾವತ್ ಮತ್ತು ಈಗ ಅಜಿತ್ ಪವಾರ್ ಅವರ ಅಪಘಾತ ಆಗಿದೆ. ಇವುಗಳಲ್ಲಿ ಯಾವುದರ ತನಿಖಾ

# ಸಾರಿಗೆ ಮುಷ್ಕರ: ಇಂದು ಡೆಡ್‌ಲೈನ್

## ಬೇಡಿಕೆಗಳನ್ನು ಈಡೇರಿಸದಿದ್ದರೆ ಸಾಮೂಹಿಕ ರಾಜೀನಾಮೆ ಬೆದರಿಕೆ

**ಬೆಂಗಳೂರು:** ಸಾರಿಗೆ ನೌಕರರು ಹಾಗೂ ಸರ್ಕಾರದ ನಡುವಿನ ಜಟಾಪಟಿ ಮುಂದುವರಿದಿದೆ. ತಮ್ಮ ಬೇಡಿಕೆಗಳ ಈಡೇರಿಕೆಗೆ ಸಾರಿಗೆ ಸಂಘಟನೆಗಳು ಸರ್ಕಾರಕ್ಕೆ ಜ.29ಕ್ಕೆ ಡೆಡ್‌ಲೈನ್ ನೀಡಿವೆ. ನಾಳೆ ಸಂಜೆಯೊಳಗೆ ಬೇಡಿಕೆ ಈಡೇರದೆ ಇದ್ದರೆ ನೌಕರರು ಸಾಮೂಹಿಕ ರಾಜೀನಾಮೆ ನೀಡಿ ಮುಷ್ಕರ ನಡೆಸುವುದಾಗಿ ಎಚ್ಚರಿಕೆ ನೀಡಿದೆ.

ಕೆಎಸ್‌ಆರ್‌ಟಿಸಿ ಸೇರಿದಂತೆ ಕರ್ನಾಟಕದ ನಾಲ್ಕು ಸರ್ಕಾರಿ ಸಾರಿಗೆ ನಿಗಮಗಳ ನೌಕರರು ಸರ್ಕಾರದ ವಿರುದ್ಧ ಸಮರ ಸಾರಿದ್ದಾರೆ. ವೇತನ ಪರಿಷ್ಕರಣೆ ಹಾಗೂ ದೀರ್ಘಕಾಲದಿಂದ ಬಾಕಿ ಇರುವ ಬೇಡಿಕೆಗಳನ್ನು ಈಡೇರಿಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿ ಜನವರಿ 29ರಂದು ಸಾರಿಗೆ ನಿಗಮಗಳ



ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ, ಬೆಂಗಳೂರು ಚಲೋಗೆ ಕರೆ ನೀಡಿದ್ದಾರೆ.

ನಾಳೆ ರಾಜ್ಯದ ಮೂಲೆ ಮೂಲೆಗಳಿಂದ ಬರೋ ಸಾವಿರಾರು ಸಾರಿಗೆ ನೌಕರರು ಫ್ರೀಡಂಪಾರ್ಕಿನಲ್ಲಿ ಬೆಳಗ್ಗೆ 10 ಗಂಟೆಯಿಂದ 4 ಗಂಟೆವರೆಗೂ ಪ್ರತಿಭಟನೆ ನಡೆಸಲಿದ್ದಾರೆ. ಪ್ರಮುಖವಾಗಿ ಎರಡು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಚಲೋ ನಡೆಸಲಾಗುತ್ತಿದೆ.

ಸರ್ಕಾರದ ಎದುರು ಸಾರಿಗೆ ನೌಕರರು ಎರಡು ಬೇಡಿಕೆ ಇಟ್ಟಿದ್ದಾರೆ. ಈ ಪೈಕಿ 2020ರ ಜನವರಿ 1ರಿಂದ 2023ರ ಫೆಬ್ರವರಿ 28ರವರೆಗಿನ 38 ತಿಂಗಳ ವೇತನ ಪರಿಷ್ಕರಣೆಯ ಹಿಂಬಾಕಿ ನೀಡಬೇಕು. 2024ರಿಂದ ನಾಲ್ಕು ವರ್ಷಗಳ ವೇತನ ಒಪ್ಪಂದಕ್ಕೆ ಆಗ್ರಹಿಸಲಾಗುತ್ತಿದೆ. ನಾಳೆ ಸಂಜೆವರೆಗೂ

ಸರ್ಕಾರದಿಂದ ಯಾವುದೇ ಪ್ರತಿಕ್ರಿಯೆ ಬರದೇ ಹೋದರೆ ಜನವರಿ 30ರಿಂದ ಸಾರಿಗೆ ಪುಟ 2ಕ್ಕೆ

### ಸುಬ್ಬರಾವ್ ನಿಧನ

ಬೆಂಗಳೂರು: ಸಾರಿಗೆ ನೌಕರರ ಹಾಗೂ ಕಾರ್ಮಿಕ ಸಂಘದ ಮುಖಂಡ ಅನಂತ ಸುಬ್ಬರಾವ್ ಅವರು ಬುಧವಾರ ಸಂಜೆ ಹೃದಯಾಘಾತದಿಂದ ನಿಧನರಾದರು

### ನೋ ವರ್ಕ್ ನೋ ಪೇ

ಬೆಂಗಳೂರು: ಮುಷ್ಕರಕ್ಕೆ ಮುಂದಾಗಿರುವ ಸಾರಿಗೆ ನೌಕರರಿಗೆ ಸಾರಿಗೆ ಇಲಾಖೆ ಶಾಕ್ ಕೊಟ್ಟಿದೆ. ಸಾರಿಗೆ ನೌಕರರು ಯಾವುದೇ ಮುಷ್ಕರ ಹೂಡುವಂತಿಲ್ಲ. ಮುಷ್ಕರಕ್ಕೆ ಬೆಂಬಲವನ್ನು ಸೂಚಿಸುವಂತಿಲ್ಲ ಎಂದು ಸೂಚಿಸಿದೆ. ಗುರುವಾರ ಸಿಬ್ಬಂದಿ ಕರ್ತವ್ಯಕ್ಕೆ ಬಂದಿಲ್ಲ ಅಂದರೆ ನೋ ವರ್ಕ್ ನೋ ಪೇ ಎಂದು ಕೆಎಸ್‌ಆರ್‌ಟಿಸಿ ಎಂ.ಡಿ.ಅಕ್ರಂ ಪಾಷ ಆದೇಶ ಹೊರಡಿಸಿದ್ದಾರೆ.

# ಜ.30ಕ್ಕೆ ಮಾವುತ ಚಿತ್ರ ತೆರೆಗೆ

ಮೈಸೂರು: ಹಲವು ಅಂಬಾರಿ ಹೊತ್ತು ಎಲ್ಲರ ಪ್ರೀತಿಗೆ ಪಾತ್ರನಾಗಿದ್ದ ಅರ್ಜುನನ ಸಮರ್ಪಿಸಿದ ಮಾವುತ ಚಿತ್ರವೂ ಜ.30ರಂದು ರಾಜ್ಯಾದ್ಯಂತ ತೆರೆ ಕಾಣಲಿದೆ.

ಈ ಸಂಬಂಧ ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿದ ಚಿತ್ರತಂಡ ತಮ್ಮ ಚಿತ್ರೀಕರಣದ ಅನುಭವ ಹಾಗೂ ಚಿತ್ರದ ಪ್ರಾಮುಖ್ಯತೆ ಬಗ್ಗೆ ತಿಳಿಸಿಕೊಟ್ಟರು. ಈ ಕುರಿತು ಮಾತನಾಡಿದ ನಟ ಹಾಗೂ ನಿರ್ಮಾಪಕ ಲಕ್ಷ್ಮೀಪತಿ ಬಾಲಾಜಿ ಮಾತನಾಡಿ, ಅರ್ಜುನ ಆನೆ ಸ್ಮರಣೆಗಾಗಿ ಮಾವುತ ಚಿತ್ರ ಮಾಡಿದ್ದೇವೆ. ಅರಣ್ಯದ ಬಗ್ಗೆ ಹಾಗೂ ಕಾಡಿನ ಜನಗಳ ಪದ್ಧತಿ ಮೊದಲಾದವುಗಳ ನೈಜ ಚಿತ್ರೀಕರಣ ಮಾಡಲಾಗಿದೆ. ಅರ್ಜುನನಿಗೂ ಮೈಸೂರಿಗೂ ಅವಿನಾಭಾವ ಸಂಬಂಧವಿದೆ. ಹೀಗಾಗಿ ಈ ಭಾಗದ ಜನರು ಚಿತ್ರ ನೋಡಿ ಪ್ರೋತ್ಸಾಹಿಸಬೇಕಿದೆ. ಊ ಮೊದಲು ಬರೀ 10% ಬಡ್ಡಿ ಚಿತ್ರ ನಿರ್ಮಿಸಿದ್ದೇನೆ. ಇದು ನನ್ನ ಎರಡನೇ ಸಿನಿಮಾವಾಗಿದ್ದು, ರಾಜ್ಯದ 50 ಚಿತ್ರಮಂದಿರಗಳಲ್ಲಿ ತೆರೆಕಾಣಲಿದೆ ಎಂದು ಹೇಳಿದರು.

ನಟಿ ಮಹಾಲಕ್ಷ್ಮಿ ಮಾತನಾಡಿ ಚಿತ್ರದಲ್ಲಿ ನಾನು ಕಾಡಿನ ಭಾಗದ ಯುವತಿಯಾಗಿ ನಟಿಸಿದ್ದು ಕಾಡಿನ ರಕ್ಷಣೆಯನ್ನು ಹೇಗೆಲ್ಲಾ ಮಾಡುವ ಸವಾಲು ಹೆದರಿಸುತ್ತೇವೆಂಬುದು ಚಿತ್ರದ ಕಥೆಯಾಗಿದೆ ಎಂದು ಹೇಳಿದರು. ಪ್ರೆಸ್ ನೋಟ್



ಜ್ಞಾನರ್ ಅವರ ಎಸ್.ಡಿ.ಆರ್ ಪ್ರೊಡೆಕ್ಷನ್ ಚಿತ್ರದಲ್ಲಿ ಸಹ ನಿರ್ಮಾಪಕ ಮರುಳಿದರ ತಿಪ್ಪೂರ್, ಎನ್. ಚೆಲುವರಾಜು, ಛಾಯಾಗ್ರಹಣದಲ್ಲಿ ವೀನಸ್ ಮೂರ್ತಿ, ಸಂಕಲನದಲ್ಲಿ ವೆಂಕಟೇಶ್ ಯು ಡಿ ವಿ, ಸಂಗೀತ ವಿನು ಮನಸು, ಹಿನ್ನಲೆ ಸಂಗೀತ ರವಿವರ್ಮ, ನೃತ್ಯ ಜಗ್ಗು ಮಾಸ್ತರ್ , ಸಾಹಸ ಥ್ರಿಲ್ಲರ್ ಮಂಜು, ಕಮಲ್ ಗೋಯಲ್, ಪಿಆರ್ ಓ ಸುರಿಂದ್ರ ವೆಂಕಟೇಶ್, ಡಾ. ಪ್ರಭು ಗಂಜಿಹಾಳ, ಡಾ. ವೀರೇಶ್ ಹಂಡಿಗಿ ಇದ್ದಾರೆ. ಮತ್ತೋರ್ವ ನಟಿ ದಿವ್ಯಶ್ರೀ, ಥ್ರಿಲ್ಲರ್ ಮಂಜು, ಪದ್ಮವಾಸಂತಿ, ಬಾಲಾರಾಜ್ ವಾಡಿ, ಲಯಕೋಕಿಲ, ನಂಜು ಸಿದ್ದಪ್ಪ, ಕೈಲಾಶ್ ಕುಟ್ಟಪ್ಪ, ಮಿಮಿಕ್ರಿ ಮಂಜು ಇನ್ನು ಮುಂತಾದವರು ತಾರಾಂಗಣದಲ್ಲಿದ್ದಾರೆ.

# ಪತ್ರಕರ್ತರ ಆರೋಗ್ಯ ಯೋಜನೆ 3 ಲಕ್ಷ ಘೋಷಣೆ



ಮೈಸೂರು: ನಗರದ ಜಿಲ್ಲಾ ಪತ್ರಕರ್ತರ ಆರೋಗ್ಯ ಭದ್ರತೆ ಸಮಾಜ ಸೇವಕರು ಹಾಗೂ ಹಿರಿಯ ಸಂಪಾದಕರು 3 ಲಕ್ಷ ರೂ.ದೇಣಿಗೆ ನೀಡುವುದಾಗಿ ಘೋಷಣೆ ಮಾಡಿದರು.

ಜಿಲ್ಲಾ ಪತ್ರಕರ್ತರ ಸಂಘ ಮತ್ತು ಜಿಎಸ್‌ಎಸ್ ಸಮ್ಮೂಹ ಸಂಸ್ಥೆ ಯಿಂದ ಪತ್ರಕರ್ತರ ಭವನದಲ್ಲಿಂದು ಪತ್ರಕರ್ತರ ಆರೋಗ್ಯ ರಕ್ಷಣೆ ಸಂಬಂಧ ನಡೆದ ಸಲಹಾ ಸಭೆ ಮತ್ತು ಫಿಟ್ ಮೈಸೂರ್ ಯಶಸ್ಸಿನ ಕೃತಜ್ಞತಾ ಸಭೆಯಲ್ಲಿ ಇಂತಹದೊಂದು ಘೋಷಣೆ ಮಾಡಿದರು. ಪತ್ರಕರ್ತರ ಆರೋಗ್ಯ ನಿಧಿಗೆ ತಲಾ ಒಂದು ಲಕ್ಷ ರೂ. ಹಿರಿಯ ಪತ್ರಕರ್ತರ ಟಿ.ಗುರುರಾಜ್, ಮ.ಹಿ. ಮಹೇಶ್ ಹಾಗೂ ಜಿಎಸ್‌ಎಸ್ ಸಮ್ಮೂಹ ಸಂಸ್ಥೆಯ ಮುಖ್ಯಸ್ಥ ಶ್ರೀಹರಿ ದ್ವಾರಕನಾಥ್ ಘೋಷಿಸಿದರು. ಸಂಘದಿಂದ ಎಲ್ಲರಿಗೂ ಅಭಿನಂದನೆ ಸಲ್ಲಿಸಿದರು.

ಈ ವೇಳೆ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್, ಗ್ರಾಮಾಂತರ ಉಪಾಧ್ಯಕ್ಷ ದಾ.ರಾ.ಮಹೇಶ್, ಕಾರ್ಯಕಾರಿ ಸಮಿತಿ ಸದಸ್ಯರಾದ ಸೋಮಶೇಖರ್, ರಾಜುಕಾರ್ಯ, ಕವಿತಾ, ಪುನೀತ್ ಇನ್ನಿತರರು ಉಪಸ್ಥಿತರಿದ್ದರು.

## ಮೊದಲ ಪುಟದಿಂದ

### ವಿಮಾನ ಪತನ: ಅಜಿತ್ ಪವಾರ್ ಸಾವು

ಪ್ರಮುಖ ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸಬೇಕಿತ್ತು.

ಲಿಯರ್‌ಜೆಟ್ 45 ವಿಮಾನ ಮುಂಬೈನಿಂದ ಹಾರಾಟ ಆರಂಭಿಸಿದ ಒಂದು ಗಂಟೆಯ ನಂತರ ಲ್ಯಾಂಡಿಂಗ್ ಸಮಯದಲ್ಲಿ ನಿಯಂತ್ರಣ ಕಳೆದುಕೊಂಡಿದೆ ಎಂದು ವರದಿಯಾಗಿದೆ. ಪವಾರ್ ಅವರು ಮಹಾರಾಷ್ಟ್ರದ ಉಪ ಮುಖ್ಯಮಂತ್ರಿಯಾಗಿ ಸತತವಾಗಿ ದೀರ್ಘಕಾಲ ಸೇವೆ ಸಲ್ಲಿಸಿದ್ದಾರೆ. ಮುಖ್ಯಮಂತ್ರಿಗಳಾದ ಪೃಥ್ವಿರಾಜ್ ಚವಾಣ್, ದೇವೇಂದ್ರ ಫಡ್ನವೀಸ್, ಉದ್ಧವ್ ಠಾಕ್ರೆ ಮತ್ತು ಏಕನಾಥ್ ಶಿಂಧೆ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ.

ಅಜಿತ್ ಪವಾರ್ ಸಾವು ಮಹಾರಾಷ್ಟ್ರದ ರಾಜಕೀಯ ವ್ಯವಸ್ಥೆಗೆ ದೊಡ್ಡ ಆಘಾತ ನೀಡಿದೆ. 66 ವರ್ಷದ ಪವಾರ್ ಅವರು ರಾಜ್ಯದ ಅತ್ಯಂತ ಪ್ರಭಾವಿ ನಾಯಕರಲ್ಲಿ ಒಬ್ಬರು. ಮಹಾರಾಷ್ಟ್ರದ ಉಪ ಮುಖ್ಯಮಂತ್ರಿಯಾಗಿ ಆರನೇ ಅವಧಿಗೆ ಅವರು ಸೇವೆ ಸಲ್ಲಿಸುತ್ತಿದ್ದರು.

ಬಾರಾಮತಿ ಸಂಸದೀಯ ಕ್ಷೇತ್ರದಿಂದ ಮೊದಲ ಬಾರಿಗೆ ಅವರು 1991ರಲ್ಲಿ ಲೋಕಸಭೆಗೆ ಆಯ್ಕೆಯಾಗಿದ್ದರು. ನಂತರ ತಮ್ಮ ಚಿಕ್ಕಪ್ಪ ಶರದ್ ಪವಾರ್ ಅವರಿಗೆ ಆ ಸ್ಥಾನವನ್ನು ಬಿಟ್ಟುಕೊಟ್ಟರು. ಅವರು ಬಾರಾಮತಿ ವಿಧಾನಸಭಾ ಕ್ಷೇತ್ರದಿಂದ ಏಳು ಬಾರಿ ಮಹಾರಾಷ್ಟ್ರ ವಿಧಾನಸಭೆಗೆ ಆಯ್ಕೆಯಾದರು. ಅವರು ಮೊದಲು 1991ರ ಉಪಚುನಾವಣೆಯಲ್ಲಿ ಗೆದ್ದರು ಮತ್ತು ನಂತರ 1995, 1999, 2004, 2009 ಮತ್ತು 2014 ರಲ್ಲಿ ಗೆಲುವು ಸಾಧಿಸಿದ್ದರು.

ನವೆಂಬರ್ 2019ರಲ್ಲಿ ಎನ್‌ಸಿಪಿಯಲ್ಲಿ ಒಡಕು ಮೂಡಿತು. ಹೀಗಾಗಿ ಬಿಜೆಪಿ ನೇತೃತ್ವದ ಸರ್ಕಾರವನ್ನು ಸೇರಿಕೊಂಡು ಉಪಮುಖ್ಯಮಂತ್ರಿಯಾದರು. ಫೆಬ್ರವರಿ 2024ರಲ್ಲಿ, ಚುನಾವಣಾ ಆಯೋಗವು ಅಜಿತ್ ಪವಾರ್ ನೇತೃತ್ವದ ಬಣಕ್ಕೆ ಪಕ್ಷದ ಹೆಸರು ಮತ್ತು ಚಿಹ್ನೆಯನ್ನು ನೀಡಿತು. ಅವರು ಸುನೇತ್ರಾ ಪವಾರ್ ಅವರನ್ನು ವಿವಾಹವಾಗಿದ್ದರು, ಅವರಿಗೆ ಜಯ್ ಮತ್ತು ಪಾರ್ಥ್ ಪವಾರ್ ಎಂಬ ಇಬ್ಬರು ಗಂಡು ಮಕ್ಕಳಿದ್ದಾರೆ.

### ಭಾರೀ ಪ್ರಮಾಣದ ಬೆಂಕಿ: ಭೀಕರ ದೃಶ್ಯದ ಮಾಹಿತಿ

ಯತ್ನಿಸಿದರು. ಬೆಂಕಿ ಜ್ವಾಲೆ ಭಾರಿ ಪ್ರಮಾಣದಲ್ಲಿದ್ದರಿಂದ ಏನೂ ಮಾಡಲು ಆಗಲಿಲ್ಲ. ಅಜಿತ್ ಪವಾರ್ ಸೇರಿ ಹಲವರು ವಿಮಾನದಲ್ಲಿದ್ದರು. ಇದು ನಿಜಕ್ಕೂ ಅತ್ಯಂತ ನೋವಿನ ಸಂಗತಿ ಎಂದಿದ್ದಾರೆ. ಅಪಘಾತದ ಸ್ಥಳದಲ್ಲಿ ಬೆಂಕಿಯಿಂದ ಭಾರಿ ಹೊಗೆ ಆವರಿಸಿರುವುದು ಕಂಡುಬಂದಿದೆ. ಸುತ್ತಲಿನ ಬಯಲು ಪ್ರದೇಶದಲ್ಲೆಲ್ಲ ಹೊಗೆ ಆವರಿಸಿರುವುದನ್ನು ವಿಡಿಯೊಗಳಲ್ಲಿ ಕಾಣಬಹುದಾಗಿದೆ. ಲ್ಯಾಂಡಿಂಗ್ ಯತ್ನದ ವೇಳೆ ವಿಮಾನವು ರನ್‌ವೇಯಿಂದ ಜಾರಿ ಪಕ್ಕಕ್ಕೆ ಸರಿದಿದೆ. ಈ ಸಂದರ್ಭ ಸ್ಫೋಟ ಸಂಭವಿಸಿದೆ. ಜೆಟ್ 45 ವಿಮಾನವನ್ನು ಮುಂಬೈನಿಂದ ಕರೆಸಲಾಗಿತ್ತು ಎಂದು ವಿಮಾನ ನಿಲ್ದಾಣದ ವ್ಯವಸ್ಥಾಪಕ ಶಿವಾಜಿ ತವಾರೆ ಮಾಧ್ಯಮಗಳಿಗೆ ತಿಳಿಸಿದ್ದಾರೆ.

### ವಾಚ್, ಬಟ್ಟೆಯಿಂದ ಗುರುತು ಪತ್ತೆ

**ಮಾಹಿತಿಗಳು ತಿಳಿಸಿವೆ. ವಿಎಸ್‌ಆರ್ ವೆಂಚರ್ಸ್ ನಿರ್ವಹಿಸುತ್ತಿದ್ದ ಬೊಂಬಾರ್ಡಿಯರ್ ಲಿಯರ್ಜೆಟ್– 45, ವಿಮಾನ ನಿಲ್ದಾಣ ಸಮೀಪದಲ್ಲಿ ಪತನಗೊಂಡಿದೆ. ಬೆಳಗ್ಗೆ ಗೋಚರತೆ ತೀವ್ರವಾಗಿ ಕಡಿಮೆಯಾಗಿತ್ತು. ವಿಮಾನ ಪತನಗೊಂಡ ವಿಚಾರ ತಿಳಿದು ರಕ್ಷಣಾ ತಂಡಗಳು ಸ್ಥಳಕ್ಕೆ ಧಾವಿಸಿದವು. ಆದರೆ, ಅಪಘಾತದ ತೀವ್ರತೆಗೆ ಜೆಟ್ ಸಂಪೂರ್ಣ ಸುಟ್ಟು ಕರಕಲಾಗಿತ್ತು. ವಿಮಾನದ ಅವಶೇಷಗಳಲ್ಲಿ ಮೃತದೇಹಗಳನ್ನು ಗುರುತಿಸುವುದು ಕಷ್ಟಕರವಾಗಿತ್ತು. ಪವಾರ್ ದೇಹವನ್ನು ಅವರ ವಾಚ್ ಮತ್ತು ಬಟ್ಟೆಗಳನ್ನು ಆಧರಿಸಿ ಗುರುತಿಸಲಾಯಿತು. ಉಳಿದವರನ್ನು ಬಟ್ಟೆ ಮತ್ತು ಅವರ ಇತರೆ ವಸ್ತುಗಳ ಆಧಾರದಲ್ಲಿ ಗುರುತು ಪತ್ತೆ ಮಾಡಲಾಗಿದೆ.**

# ಬಜೆಟ್‌ನಲ್ಲಿ ನಿರ್ಧಾರ ಘೋಷಿಸಿ

## ಕುವೆಂಪು ಸ್ಮಾರಕ ವಿಚಾರ| ಕುವೆಂಪು ಸ್ಮಾರಕ ಹೋರಾಟ ಸಮಿತಿ ಎಚ್ಚರಿಕೆ

ಮೈಸೂರು: ಕುವೆಂಪು ಅವರ ಮೈಸೂರು ನಿವಾಸ ವನ್ನು ರಾಷ್ಟ್ರೀಯ ಸ್ಮಾರಕವನ್ನಾಗಿ ನಿರ್ಮಿಸಲು ಸರಕಾರ ಮುಂಬರುವ ಬಜೆಟ್‌ನಲ್ಲಿ ಅನುಮೋದನೆ ನೀಡಿ ಹಣ ಬಿಡುಗಡೆ ಮಾಡಬೇಕು ಇಲ್ಲವಾದಲ್ಲಿ ರಾಜ್ಯವ್ಯಾಪಿ ಬೃಹತ್ ಹೋರಾಟ ಕೈಗೊಳ್ಳಲು ಉದಯರವಿ ಕುವೆಂಪು ಸ್ಮಾರಕ ಹೋರಾಟ ಸಮಿತಿ ನಿರ್ಧಾರ ಕೈಗೊಂಡಿದೆ.

ಮೈಸೂರಿನ ವಿಜಯನಗರ 2ನೇ ಹಂತದ ಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಬುಧವಾರ ಸಮಿತಿವತಿಯಿಂದ ಆಯೋಜಿಸಿದ್ದ ಚಿಂತಕರ ಚಿಂತನಾ ಸಭೆಯಲ್ಲಿ ನಾನಾ ಕನ್ನಡಪರ ಹೋರಾಟ ಸಂಘಟನೆಗಳ ಪಧಾಧಿಕಾರಿಗಳು, ಕನ್ನಡ ಹೋರಾಟಗಾರರು, ಹಿರಿಯ ಸಾಹಿತಿಗಳು, ಸಾಹಿತ್ಯ ಪ್ರೇಮಿಗಳು, ಕುವೆಂಪು ಅವರ ಅಭಿಮಾ ನಿಗಳು, ಅನುಯಾಯಿಗಳು ಕನ್ನಡ ಪ್ರೇಮಿಗಳು ಚರ್ಚಿಸಿ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಉದಯರವಿ ಕುವೆಂಪು ಸ್ಮಾರಕ ಹೋರಾಟ ಸಮಿತಿ ಅಧ್ಯಕ್ಷ ಮೋಹನ್‌ಕುಮಾರ್‌ಗೌಡ ತಿಳಿಸಿದರು.

ಕುವೆಂಪು ನಿವಾಸ ಉದಯ ರವಿ ಮನೆ, ಅವರು ಬಳಕೆ ಮಾಡುತ್ತಿದ್ದ ವಸ್ತುಗಳು ಹಾಗೂ ಅವರಿಗೆ ಸಂಬಂಸಿದ ಎಲ್ಲಾ ನೆನಪುಗಳ ಸ್ಮರಣಿಕೆ ಗಳನ್ನು ಇರುವ ಸ್ಥಿತಿಯಲ್ಲಿಯೇ ಉಳಿಸಿಕೊಂಡು ರಾಷ್ಟ್ರೀಯ ಸ್ಮಾರಕವನ್ನಾಗಿ ರೂಪಿಸಬೇಕು. ಕುಟುಂ ಬವರಿಂದ ನಿವಾಸವನ್ನು ಖರೀದಿಸಿ ಅವರಿಗೆ ಅದಕ್ಕೆ ಪರ್ಯಾಯವಾಗಿ ನಗರ ಕೇಂದ್ರದಲ್ಲಿಯೇ ನಿವಾ ಸವನ್ನು ಸರಕಾರವೇ ನಿರ್ಮಿಸಿಕೊಡಬೇಕು. ಈ ನಿರ್ಧಾರವನ್ನು ಸರಕಾರ ಈ ಬಜೆಟ್‌ನಲ್ಲಿಯೇ ಘೋಷಣೆ ಮಾಡಬೇಕು ಎಂಬ ಬೇಡಿಕೆಗಳನ್ನು ಒಳಗೊಂಡ ಮನವಿಯನ್ನು ಮುಖ್ಯಮಂತ್ರಿ ಸಿದ್ದ ರಾಮಯ್ಯ ಅವರಿಗೆ ಸಲ್ಲಿಸಲು ತೀರ್ಮಾನಿಸಲಾ



ಯಿತು. ಸ್ಮಾರಕ ನಿರ್ಮಿಸುವ ವಿಷಯದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಲು ಮುಂದಿನ 3 ತಿಂಗಳು ಕಾಲಾವಕಾಶ ನೀಡಲಾಗುವುದು. ಒಂದು ವೇಳೆ ಈ ಅವಯಲ್ಲಿ ಯಾವುದೇ ನಿರ್ಧಾರ ಹೊರ ಬೀಳದಿದ್ದಲ್ಲಿ ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿಯೂ ಸಮಿತಿ ವತಿಯಿಂದ ಪ್ರವಾಸ ಮಾಡಿ ಕುವೆಂಪು ಅವರ ಅಭಿಮಾನಿಗಳು, ಹೋರಾಟಗಾರರು, ಸಾಹಿತಿಗಳು, ಕನ್ನಡ ಅಭಿಮಾನಿಗಳನ್ನು ಒಟ್ಟಾಗಿ ಸೇರಿಸಿ ರಾಜ್ಯಾದ್ಯಂತ ಬೃಹತ್ ಹೋರಾಟ ರೂಪಿಸಲು ಸಮಿತಿ ನಿರ್ಧರಿಸಿದೆ ಎಂದು ತಿಳಿಸಿದರು.

**ಗೌರವದಿಂದ ನಡೆಸಿಕೊಳ್ಳಿ**

ಹಿರಿಯ ಸಾಹಿತಿ ಸಿ.ಪಿ. ಕೃಷ್ಣಕುಮಾರ್ ಅವರು ಮಾತನಾಡಿ , ಕುವೆಂಪು ಮನೆಯನ್ನು ರಾಷ್ಟ್ರೀಯ ಸ್ಮಾರಕ ಮಾಡಬೇಕು ಎಂಬುದು ನಾಡಿನ ಎಲ್ಲರ ಆಶಯವಾಗಿದೆ. ಆದರೆ ಸರಕಾಕ್ಕೆ ಈ ಬಗ್ಗೆ ಆಸಕ್ತಿ ಇದ್ದಂತೆ ಕಾಣುತ್ತಿಲ್ಲ. ಬೇರೆ ರಾಜ್ಯಗಳಲ್ಲಿ ಸಾಹಿತಿಗಳನ್ನು ಗೌರವಾಭಿಮಾನದಿಂದ ನಡೆಸಿಕೊಳ್ಳುತ್ತಾರೆ. ಆದರೆ ನಮ್ಮಲ್ಲಿ ಅಂತಹ ಅಭಿಮಾನ ಕಾಣುತ್ತಿಲ್ಲ. ಇಂತಹ ಸಂದರ್ಭದಲ್ಲಿ ಏನು ಮಾಡಬೇಕು ಎಂಬುದನ್ನು ಚರ್ಚಿಸಬೇಕಿದೆ. ನನ್ನ ಪ್ರಕಾರ ಸರಕಾರ ಈ ನಿಟ್ಟಿನಲ್ಲಿ ಆಲೋಚಿಸುವಂತೆ ಮಾಡಲು ಹೋರಾಟ ಮಾಡಬೇಕಿದೆ ಎಂದರು. ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಯುವ ಕನ್ನಡಿಗರ ಸೇನೆ ಸಂಸ್ಥಾಪಕ ರಾಜ್ಯಾಧ್ಯಕ್ಷ ನೆಲ ರಾಮ್ ಪ್ರಸಾದ್, ಕರ್ನಾಟಕ ಕ್ರಾಂತಿ ರಂಗ ಅಧ್ಯಕ್ಷ ಡಾ.ಮಂಚೇಗೌಡ, ಕರ್ನಾಟಕ ನವ ನಿರ್ಮಾಣ ವೇದಿಕೆ ಅಧ್ಯಕ್ಷ ಭೀಮಾಶಂಕರ್ ಪಾಟೀಲ್, ಕರ್ನಾಟಕ ಕಾವಲುಪಡೆಯ ರವೀಂದ್ರ, ಟಿ.ರವಿಗೌಡ, ಅಬ್ದುಲ್ ಮಾಲಿಕ್, ನಾಗರಾಜ್, ಬೆಲ್ಲಾಳ ಬೆಟ್ಟೇಗೌಡ, ರಾಮಣ್ಣ, ಪುಟ್ಟು ನಂಜಯ್ಯ, ವೆಂಕಟೇಶ್ ಸೇರಿ ಅನೇಕರು ನಿರ್ಣಯ ಕೈಗೊಳ್ಳಲಾಯಿತು

> **ಶೀಘ್ರದಲ್ಲಿಯೇ ಕುವೆಂಪು ಅವರಿಗೆ ಮರಣೋತ್ತರ ಭಾರತ ರತ್ನ ಪ್ರಶಸ್ತಿ ಘೋಷಣೆಯಾಗಲಿದೆ. ಇಂತಹ ಸಂದರ್ಭದಲ್ಲಿ ಅವರ ಮನೆಯವರ ಸಹಕಾರ ಪಡೆದು ಉತ್ತಮವಾದ ಸ್ಮಾರಕ ನಿರ್ಮಿಸಬೇಕು.**
> **–ಸಿ.ಪಿ.ಕೃಷ್ಣಕುಮಾರ್** ಹಿರಿಯ ಸಾಹಿತಿ

> **ಸರಕಾರ ಕುವೆಂಪು ಅವರನ್ನು ಮುಂದಿನ ಪೀಳಿಗೆ ನೆನಪಿಸಿಕೊಳ್ಳುವಂತೆ ಸ್ಮಾರಕ ನಿರ್ಮಿಸುವ ಕಾರ್ಯಕ್ಕೆ ಆಸಕ್ತಿ ತೋರದಿರುವುದು ಸರಿಯಲ್ಲ. ಇದು ಕನ್ನಡಿಗರು ಸಹಿಸಿಕೊಳ್ಳಲಾರದ ಬೆಳವಣಿಗೆ. ಹಾಗಾಗಿ ಚಿಂತನ ಸಭೆ ಆಯೋಜಿಸಿ ಎಲ್ಲರ ಅಭಿಪ್ರಾಯವನ್ನು ಸರಕಾರದ ಗಮನಕ್ಕೆ ತರಲಾಗುತ್ತಿದೆ.**
> **–ಮೋಹನ್‌ಕುಮಾರ್‌ಗೌಡ** ಉದಯರವಿ ಕುವೆಂಪು ಸ್ಮಾರಕ ಹೋರಾಟ ಸಮಿತಿ ಅಧ್ಯಕ್ಷ

## ಮೊದಲ ಪುಟದಿಂದ

### ಎಎಐಬಿ ತನಿಖೆ ಆರಂಭ

ಪತನಗೊಂಡಿತು. ಎಎಐಬಿ ಅಪಘಾತದ ಸ್ಥಳಕ್ಕೆ ಭೇಟಿ ನೀಡಿ, ವಿಮಾನ ಅಪಘಾತದ ಬಗ್ಗೆ ತನಿಖೆ ನಡೆಸಲಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ವಿಮಾನ ಅಪಘಾತ ತನಿಖಾ ಬ್ಯೂರೋ ಭಾರತದಲ್ಲಿ ವಿಮಾನಗಳನ್ನು ಒಳಗೊಂಡ ಘಟನೆಗಳನ್ನು ತನಿಖೆ ಮಾಡುವ ಮತ್ತು ವರ್ಗೀಕರಿಸುವ ಜವಾಬ್ದಾರಿ ಹೊಂದಿದೆ. ಅಪಘಾತ, ಗಂಭೀರ ಘಟನೆ ಅಥವಾ ಸಣ್ಣ ಘಟನೆಗಳೇ ಎಂಬುದನ್ನು ಅವುಗಳ ತೀವ್ರತೆ ಆಧಾರದ ಮೇಲೆ ನಿರ್ಧರಿಸುತ್ತದೆ. ಇದು ಅಪಘಾತಗಳ ಬಗ್ಗೆ ವಿವರವಾದ ತನಿಖೆ ನಡೆಸುತ್ತದೆ ಮತ್ತು ಸುರಕ್ಷತೆಯನ್ನು ಸುಧಾರಿಸಲು ಕ್ರಮಗಳನ್ನು ಸಹ ಸೂಚಿಸುತ್ತದೆ.

### ಬಿಗ್ ರಿಲೀಫ್

ತಯಾರಾಗಿದೆ. ಅನುಮತಿ ಸಿಗದ ಕಾರಣ ಸಲ್ಲಿಕೆ ಮಾಡುತ್ತಿಲ್ಲ. ಸ್ವಲ್ಪ ಸಮಯ ನೀಡಿದರೆ ಸೀಲ್ಡ್ ಕವರ್‌ನಲ್ಲಿ ವರದಿ ನೀಡಲು ಸಿದ್ಧ ಎಂದು ತಿಳಿಸಿದ್ದರು.

### ಇಂದು ಡೆಡ್‌ಲೈನ್

ಸರ್ಕಾರದಿಂದ ಯಾವುದೇ ಪ್ರತಿಕ್ರಿಯೆ ಬರದೇ ಹೋದರೆ ಜನವರಿ 30ರಿಂದ ಸಾರಿಗೆ ನೌಕರರು ಸಾಮೂಹಿಕ ರಾಜೀನಾಮೆ ನೀಡುವುದಾಗಿ ಜಂಟಿ ಕ್ರಿಯಾ ಸಮಿತಿ ಎಚ್ಚರಿಕೆ ನೀಡಿದೆ.

ಸಾರಿಗೆ ಸಂಘಟನೆಗಳ ಮತ್ತೊಂದು ಸಂಘಟನೆಯಾದ ಕೆಎಸ್‌ಆರ್‌ಟಿಸಿ ನೌಕರರ ಕೂಟವೂ ಸಹ ಪ್ರತಿಭಟನೆಗೆ ಮುಂದಾಗಿದೆ. ಶಿವರಾತ್ರಿ ನಂತರ ಫೆಬ್ರವರಿ 15ರಿಂದ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹಕ್ಕೆ ಕರೆ ನೀಡಿದೆ.

### ತನಿಖೆಗೆ ಆಗ್ರಹ

ವರದಿಯನ್ನೂ ಸಾರ್ವಜನಿಕಗೊಳಿಸದಿರುವುದು ಅನುಮಾನ ಮೂಡಿಸುತ್ತದೆ. ಹಾಗಾಗಿ ಇದರ ಬಗ್ಗೆ ತನಿಖೆಯಾಗಬೇಕೆಂದು ಆಗ್ರಹಿಸಿದ್ದಾರೆ.

### ಮತ್ತೊಬ್ಬ ಯುವತಿ ಸಾವು

ದಿಶಾ (23) ಮೃತ ದುರ್ದೈವಿ. ದುರ್ಘಟನೆಯಲ್ಲಿ ಸೋಮವಾರ ಸಿಂಧು, ಶಂಕರಪ್ಪ ಕೊನೆಯುಸಿರೆಳೆದಿದ್ದಾರೆ.

ಧರ್ಮರಾಜ್ ಎಂಬ ಯುವಕನಿಗೆ ಚಿಕಿತ್ಸೆ ಮುಂದುವರಿದಿದೆ. ಡೆಲ್ಟಾ ಬೀಚ್‌ನಿಂದ ಟೂರಿಸ್ಟ್ ಬೋಟ್‌ನಲ್ಲಿ 28 ಮಂದಿ ಪ್ರವಾಸಿಗರು ತೆರಳಿದ್ದರು. ಮೈಸೂರಿನ ಬಿಪಿಒ ಒಂದರಲ್ಲಿ 28 ಮಂದಿ ಸಹೋದ್ಯೋಗಿಗಳು ಕೆಲಸ ಮಾಡುತ್ತಿದ್ದರು. ಎರಡು ಪ್ರತ್ಯೇಕ ಬೋಟ್ ಗಳಲ್ಲಿ ತಲಾ 14 ಮಂದಿ ತೆರಳಿದ್ದರು. ಒಂದು ಬೋಟ್ ಮಗುಚಿ ಸಮುದ್ರ ಪಾಲಾಗಿತ್ತು. ಅಪಘಾತದಲ್ಲಿ ಮೂವರು ಸಾವನ್ನಪ್ಪಿದ್ದಾರೆ.

### ರಾಜಕಾರಣಿಗಳು ಹುಷಾರಾಗಿರಿ

ಅಪಘಾತಗಳು ಆಗುತ್ತಿರುವ ಬಗ್ಗೆ ಹಾಗೂ ತಾಂತ್ರಿಕ ದೋಷ ಎಂದು ಹೇಳುತ್ತಿದ್ದಾರೆ ಎಂದಾಗ, ಇದರ ಬಗ್ಗೆ ವಿಸ್ತೃತ ವರದಿ ಬಂದ ನಂತರ ಮಾತನಾಡುತ್ತೇನೆ. ತಾಂತ್ರಿಕ ದೋಷದ ಬಗ್ಗೆ ನನಗೆ ಏನು ಗೊತ್ತು. ಮುಂಬೈನ ಗೆಳೆಯರು ಸೇರಿದಂತೆ ಹಲವರು ವಿಷಯ ತಿಳಿಸಿದ್ದಾರೆ ಎಂದು ಡಿಕೆಶಿ ಹೇಳಿದರು.

### ಲಘು ಭೂಕಂಪನ,

ಗ್ರಾಮದ 1.0 ಕಿ.ಮೀ ವಾಯವ್ಯ ದಿಕ್ಕಿನಲ್ಲಿ ಭೂಕಂಪದ ಕೇಂದ್ರಬಿಂದು ವಿದೆ. ಲಘು ಭೂಕಂಪನದಿಂದ ಭೂಮಿಯಿಂದ ವಿಚಿತ್ರ ಶಬ್ದ ಬಂದಿದೆ. ಸ್ಥಳಕ್ಕೆ ಬೀದರ್ ತಹಶೀಲ್ದಾರ್ ಸೇರಿದಂತೆ ಸ್ಥಳೀಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

### ಫೋನ್ ಟ್ಯಾಪಿಂಗ್: ಕಾವೇರಿದ ಚರ್ಚೆ


ಮಾಡಿಸೋಣ. ನಾವೇ ರಾಜ್ಯಪಾಲರ ಹ್ಯಾಂಡ್ ಶೇಕ್ ಮಾಡಿ ಕಳಿಸಿಕೊಟ್ಟಿದ್ದೇವೆ. ರಾಜ್ಯಪಾಲರು ರಾಷ್ಟ್ರಗೀತೆ ಹಾಡದೇ ಹೊರಟುಹೋಗಿದ್ದು ಸರಿಯೇ ಎಂದು ಸಿಎಂ ಸಿದ್ದರಾಮಯ್ಯ ಪ್ರಶ್ನಿಸಿದರು.

# ಜೆಡಿಎಸ್ ಸೇರಿದ ದಲಿತ ಸಮುದಾಯದ ಮುಖಂಡರು

**ಶಿವಕುಮಾರ ತುಂಬಸೋಗೆ**

ಎಚ್.ಡಿ.ಕೋಟೆ: ವಿಧಾನಸಭಾ ಚುನಾವಣೆಗೆ ಇನ್ನೂ ಎರಡೂವರೆ ವರ್ಷ ಬಾಕಿ ಇರುವಾಗಲೇ, ಕ್ಷೇತ್ರದಲ್ಲಿ ಜಾತ್ಯಾತೀತ ಜನತಾದಳವನ್ನು 2028ಕ್ಕೆ ಅಧಿಕಾರಕ್ಕೆ ತರಲು ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ ಶತಾಯಗತಾಯ ಶಕ್ತಿಮೀರಿ ಶ್ರಮಿಸುತ್ತಿದ್ದಾರೆ.

ಮಾತೃ ಪಕ್ಷಕ್ಕೆ ಮರಳಿದ ನಂತರ, ಪಕ್ಷದ ಚಟುವಟಿಕೆಗೆ ಒತ್ತು ನೀಡುತ್ತಿದ್ದು, ಇತ್ತೀಚೆಗೆ ಹುಲಿದಾಳಿಗೆ ಮೃತಪಟ್ಟ ಸಂತ್ರಸ್ತರ ಮನೆಗೆ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಭೇಟಿ ನೀಡಿ, ಸಾಂತ್ವಾನ ಹೇಳುವಲ್ಲಿ ನೇತೃತ್ವ ವಹಿಸಿದ್ದರು. ಹಲವು ಕಾರ್ಯಕ್ರಮಗಳ ಪೂರ್ವಭಾವಿ ಹಾಗೂ ವಿಮರ್ಶಾತ್ಮಕ ಸಭೆಗಳನ್ನು ನಡೆಸುವುದು, ಸರಗೂರು–ಎಚ್.ಡಿ.ಕೋಟೆ ತಾಲೂಕಿನಾದ್ಯಂತ ಆಗ್ಗಿಂದಾಗೆ ನಡೆಯುವ ಸಭೆ, ಸಮಾರಂಭ, ಸಾವು–ನೋವುಗಳಲ್ಲೂ ಭಾಗವಹಿಸುತ್ತಿದ್ದಾರೆ. ಪಕ್ಕಕ್ಕೆ ಮರಳಿದ ನಂತರ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಕಸಬಾ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ ಜೆಡಿಎಸ್ ಅಧಿಕಾದ ಚುಕ್ಕಾಣೆ ಹಿಡಿದಿರುವುದು ಮುಖಂಡರು, ಕಾರ್ಯಕರ್ತರಲ್ಲಿ ಉತ್ಸಾಹ ಹಿಮ್ಮಡಿಯಾಗಿದೆ. ಸದ್ಯದಲ್ಲಿಯೇ ತಾ.ಪಂ, ಜಿ.ಪಂ ಚುನಾವಣೆ ನಡೆಸುವುದಾಗಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸುಳಿವು ನೀಡಿರುವುದರಿಂದ ಅತೀ ಹೆಚ್ಚಿನ ಸ್ಥಾನ ಗೆಲ್ಲಲು ಕೆ.ಎಂ.ಕೃಷ್ಣನಾಯಕ ಕಾರ್ಯತಂತ್ರ ರೂಪಿಸುತ್ತಿದ್ದಾರೆ. ಜಾತೀವಾರು ಲೆಕ್ಕಾಚಾರದಲ್ಲಿ ಅತೀ ಹೆಚ್ಚು ಜನಸಂಖ್ಯೆ ಹೊಂದಿರುವ ಸಮುದಾಯಗಳ ಮುಖಂಡರ ಜೊತೆ ಒಂದೆರಡು ಸುತ್ತಿನ ಸಭೆಗಳನ್ನೂ ನಡೆಸಲಾಗಿದೆ. ಕೆಲ ದಿನಗಳ ಹಿಂದೆ ಕುರುಬ ಸಮುದಾಯದ 200ಕ್ಕೂ



ಹೆಚ್ಚಿನ ಯುವಕರು ಜೆಡಿಎಸ್ ಗೆ ಸೇರ್ಪಡೆಗೊಂಡಿದ್ದರು.

ವಿಧಾನಸಭಾ ಚುನಾವಣೆಗಳಲ್ಲಿ ನಿರ್ಣಾಯಕ ಎನ್ನಲಾಗುತ್ತಿರುವ ದಲಿತ ಸಮುದಾಯದ ಸರಗೂರು–ಹೆಚ್.ಡಿ.ಕೋಟೆ ತಾಲೂಕಿನ ಹಲವು ಗ್ರಾಮಗಳ 250ಕ್ಕೂ ಹೆಚ್ಚಿನ ಜನರು ಭಾನುವಾರ ಮಾದಾಪುರ ಗ್ರಾಮದ ಕೃಷ್ಣನಾಯಕರ ತೋಟದಲ್ಲಿ ನಡೆದ ಕಾಯರ್ಕ್ರಮದಲ್ಲಿ ಪಕ್ಷಕ್ಕೆ ಸೇರಿದ್ದಾರೆ. ಸ್ಥಳೀಯ ಆಡಳಿತ, ಶಾಸಕರ ಕಾರ್ಯವೈಖರಿ, ರಾಜ್ಯ ಸರ್ಕಾರದ ವಿರುದ್ಧ ಕೆ.ಎಂ.ಕೃಷ್ಣನಾಯಕ ತೀವ್ರ ವಾಗ್ದಾಳಿ ಮಾಡುತ್ತಿದ್ದಾರೆ.

ಪರಿಶಿಷ್ಟರಿಗೆ ಅನ್ಯಾಯ ಮಾಡಿರುವ ಸರ್ಕಾರ: ಪ.ಜಾತಿ ಜನರ ವಿವಿಧ ಕ್ಷೇತ್ರಗಳಿಗೆ ಮೀಸಲಿಟ್ಟಿದ್ದ ಹಣವನ್ನು ರಾಜ್ಯ ಸರ್ಕಾರ ದುರುಪಯೋಗ ಪಡಿಸಿಕೊಂಡಿದೆ. ಪ.ಪಂಗಡದ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ ನಡೆದಿದೆ. ದಲಿತರನ್ನು ಕೇವಲ ಮತಕ್ಕೋಸ್ಕರ ಬಳಸಿಕೊಂಡು ಅವರ ಅಭಿವೃದ್ಧಿಯನ್ನು ಸರ್ಕಾರ ಮರೆತಿದೆ. ಹಗರಣಗಳು ಗೊತ್ತಿದ್ದರೂ ಮೀಸಲಾತಿಯಡಿ ಗೆಲುವು ಸಾಧಿಸಿರುವ ಆಡಳಿತ ಪಕ್ಷದ ಯಾವೊಬ್ಬ ಶಾಸಕರು ಚಕಾರವೆತ್ತಿಲ್ಲ. ಗುತ್ತಿಗೆಯಲ್ಲಿ ಪ.ಜಾತಿ, ಪ.ಪಂಗಡದವರ ಕಾಮಗಾರಿಗಳ ಮೀಸಲಾತಿಯನ್ನು ತೆಗೆದು, ಲ್ಯಾಂಡ್ ಆರ್ಮಿ, ಕೆ.ಆರ್.ಐ.ಡಿ.ಎಲ್ ಸೇರಿದಂತೆ ಇತರೆ ಸಂಸ್ಥೆಗಳಿಗೆ ಕಾಮಗಾರಿ ನಡೆಸಲು ಶಾಸಕ ಅನುಮತಿ ನೀಡಿದ್ದಾರೆ. ಅಲ್ಪಸಂಖ್ಯಾತರ ಕಲ್ಯಾಣ ನಿಧಿಯ ದುರ್ಬಳಕೆ ಯಿಂದ ಕೋಟೆ ಟೌನ್, ನಾಗನಹಳ್ಳಿ, ಚಿನ್ನಪ್ಪನ ಪಾಳ್ಯದಲ್ಲಿ ಕೆಲಸ ಮಾಡದೆಯೇ 3.75 ಕೋ,ರೂ, ಹಣ ಪಡೆದುಕೊಂಡು ಸಾರ್ವಜನಿಕರಿಗೆ ವಂಚಿಸಿದೆ. ತಾಲೂಕಿನ ಎಸ್.ಸಿ, ಎಸ್.ಟಿ ಗುತ್ತಿಗೆದಾರರಿಗೆ ಕಾಮಗಾರಿ ನೀಡಿದ್ದರೆ ಗುಣಮಟ್ಟದ ಕಾಮಗಾರಿ ನಿರೀಕ್ಷಿಸಬಹುದಿತ್ತು. ಆದರೆ, ಶಾಸಕ ಅನಿಲ್ ಚಿಕ್ಕಮಾದು ಅವರು ಈ ಸಮುದಾಯದವರಿಗೆ ವಂಚಿಸಿದ್ದಾರೆ. ಸರ್ಕಾರಿ ಕಚೇರಿಗಳಲ್ಲಿ ಲಂಚಾವತಾರ ಮಿತಿ ಮೀರಿದೆ. ರೈತರ ಕೆಲಸಗಳು ನಡೆಯುತ್ತಿಲ್ಲ ಎಂಬ ದೂರುಗಳು ಪದೇ, ಪದೇ ಕೇಳಿ ಬರುತ್ತಿವೆ ಎಂದು ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ ಕಿಡಿಕಾರಿದರು.

**ದುಡ್ಡಿನ ವ್ಯಾಮೋಹ ಬಿಟ್ಟ ವ್ಯಕ್ತಿ ಶಾಸಕ ಆಗಲಿ**

ಜಕ್ಕಹಳ್ಳಿ ಗ್ರಾಮದ ಶ್ರೀನಿವಾಸ್, ಹೆಬ್ಬಲಗುಪ್ಪೆ ರವಿ, ಹೊಳೆಹುಂಡಿ ಮಹದೇವ್, ಹೊಸಮಾಳ ರಾಜು ಮಾತನಾಡಿ, ತಾಲೂಕು ಹಿಂದುಳಿದಿದೆ ಎಂಬುದನ್ನೇ ಕೆಲವರು ಬಂಡವಾಳ ಮಾಡಿಕೊಂಡಿದ್ದಾರೆ. ತಾಲೂಕಿಗೆ ಸಾಕಷ್ಟು ಅನುದಾನ ಬರುತ್ತಿದೆ. ಚುನಾವಣೆಗೆ ಹಣ ಹೂಡುವ ವ್ಯಕ್ತಿಗಳು ಗೆಲುವು ಸಾಧಿಸಿದ ನಂತರ, ಹಣವನ್ನು ದುಪ್ಪಟ್ಟು ಮಾಡಿಕೊಂಡು ತಾಲೂಕಿಗೆ ಅನ್ಯಾಯ ಮಾಡುತ್ತಿದ್ದಾರೆ. ಸಾಕಷ್ಟು ಅನುದಾನ ಬರುತ್ತಿದ್ದರೂ ಮುಖ್ಯ ರಸ್ತೆಗಳ ಗುಂಡಿ ಮುಚ್ಚಿಲ್ಲ. ರಸ್ತೆಗಳು ಅಭಿವೃದ್ಧಿ ಕಂಡಿಲ್ಲ. ಇಲ್ಲಿನ ಯುವಕರಿಗೆ ಉದ್ಯೋಗ ಸಿಗುತ್ತಿಲ್ಲ. ಹತ್ತು ವರ್ಷಗಳಿಂದ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ, ಕರೋನ ಸಂದರ್ಭದಲ್ಲಿ ಕಿಟ್ ಗಳ ವಿತರಣೆ, ಆಂಬ್ಯುಲೆನ್ಸ್ ನೀಡಿಕೆ, ಕ್ಯಾಂಟೀನ್ ಮೂಲಕ ಕಡಿಮೆ ಖರ್ಚಿನಲ್ಲಿ ತಿಂಡಿ, ಊಟ ನೀಡಿ ಹಸಿದವರ ಹೊಟ್ಟೆ ತುಂಬಿಸಿದ್ದಾರೆ. ಕೃಷ್ಣನಾಯಕ ಎಲ್ಲ ವಯೋಮಾನದವರೊಂದಿಗೂ ಬೆರೆಯುವ ಸರಳ ವ್ಯಕ್ತಿ, ಕಾರ್ಯಕರ್ತರಿಗೆ ಗೌರವ ನೀಡುತ್ತಾರೆ. ಬಿಜೆಪಿ, ಜೆಡಿಎಸ್ ಎರಡೂ ಪಕ್ಷಗಳಲ್ಲಿ ಉತ್ತಮ ಭಾಂದವ್ಯ ಹೊಂದಿದ್ದಾರೆ. ವಿಧಾನ ಪರಿಷತ್ ಸದಸ್ಯರಾಗುವ ಅವಕಾಶವಿದ್ದರೂ, ಜನರಿಂದಲೇ ನೇರವಾಗಿ ಆಯ್ಕೆಯಾಗಬೇಕು ಎಂಬ ಅಚಲ ನಿರ್ಧಾರ ಹೊಂದಿದ್ದಾರೆ. ಮುಂದಿನ ಚುನಾವಣೆಯಲ್ಲಿ ಕೃಷ್ಣನಾಯಕರ ಗೆಲುವು ನಿಶ್ಚಿತ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಎಚ್.ಡಿ.ಕೋಟೆ ತಾಲೂಕು ಅಧ್ಯಕ್ಷ ರಾಜೇಂದ್ರ, ಸರಗೂರು ತಾ.ಅಧ್ಯಕ್ಷ ಗೋಪಾಲಸ್ವಾಮಿ, ಎಸ್‌ಸಿ ಘಟಕದ ಅಧ್ಯಕ್ಷ ಡಿ.ನಾಗರಾಜು, ಮುಖಂಡರಾದ ಸೋಮಣ್ಣ, ನಾಗರಾಜು, ಶಿವನಂಜು, ಮಾದೇವಯ್ಯ, ಚಲುವರಾಜು, ರಾಮರಾಜು, ಸಣ್ಣಪ್ಪ, ಕೃಷ್ಣಯ್ಯ, ವೈ.ಬಿ. ಕೇಶವಮೂರ್ತಿ, ಮಹೇಂದ್ರ, ಈಶ್ವರ, ದೇವಪ್ಪ, ಕರಿಸ್ವಾಮಿ, ಶಿವಶಂಕರ್, ಉಮೇಶ್, ಕಾಳಸ್ವಾಮಿ, ಕೃಷ್ಣಯ್ಯ, ವೆಂಕಟಸ್ವಾಮಿ, ಚನ್ನ, ಮಲ್ಲೇಶ್, ಪದ್ಮರಾಜು, ಶ್ರೀಧರ್, ಲಿಂಗರಾಜು, ನಟೇಶ್, ನಾರಾ ಯಣ್, ರವಿಕುಮಾರ್, ವೆಂಕಟೇಶ್, ನಂಜುಂಡರಾಜು, ರವಿ, ರಾಜಣ್ಣ, ಚಂದ್ರು, ಶಿವಶಂಕರ, ಮಲ್ಲಿಕಾರ್ಜುನ, ಮರುಲಿಂಗಯ್ಯ, ತೋಪಯ್ಯ, ರವಿ, ಸುರೇಶ್, ಚಂದು, ರಾಜು, ಮಲ್ಲೇಶ್, ಚನ್ನಣ್ಣ, ಉಮೇಶ, ಮಹೇಂದ್ರ, ಅರುಣ್, ನಾಗರಾಜು, ಶಿವಣ್ಣ, ಈಶ್ವರ್, ಜಯಣ್ಣ, ಶ್ಯಾಮಸುಂದರ್, ತೇಜು, ಡಾ. ರಾಮರಾಜು, ಕುಮಾರ್, ದೇವ ರಾಜು, ಶೇಖರ್, ಶ್ರೀನಿವಾಸ್, ಪುಟ್ಟ ರಾಜು, ಶಿವರಾಜು, ರಾಜೇಂದ್ರ, ರಾಜ ಮೂರ್ತಿ, ಮಾದಯ್ಯ, ಚಲುವರಾಜು ಇದ್ದರು.

> **ಕೆಂಚನಹಳ್ಳಿ, ಕೋಹಳ್ಳ, ಲಂಕೆ ಗ್ರಾಮಗಳ ರೈತರು ಸುಮಾರು ನಲವತ್ತು ವರ್ಷಗಳಿಂದ ಸ್ವಾಧೀನದಲ್ಲಿದ್ದರೂ ಅವರಿಗೆ ಸಾಗುವಳಿ ಕೊಡಿಸುವಲ್ಲಿ ಶಾಸಕರು ಸಂಪೂರ್ಣ ವಿಫಲವಾಗಿದ್ದಾರೆ. ಇಂದಿಗೂ ಸಹ ಕೆಲವು ಗ್ರಾಮಗಳು ಮೂಲಸೌಲಭ್ಯಗಳಿಂದ ವಂಚಿತವಾಗಿವೆ. ತಾಲೂಕು ಅಭಿವೃದ್ಧಿ ಕಾಣಲು ಕೃಷ್ಣನಾಯಕ ಶಾಸಕರಾಗಬೇಕು.**
> **–ಎಂ.ಡಿ.ಮಂಚಯ್ಯ** ದಲಿತ ಮುಖಂಡ.

ಕರ್ನಾಟಕ ಸರ್ಕಾರ




## ಕೇಂದ್ರ ಸರ್ಕಾರ ಜಾರಿಗೆ ತಂದಿರುವ ವಿಬಿ-ಗ್ರಾಮ್ ಜಿ
## ಗ್ರಾಮ ಪಂಚಾಯತಿಗಳ ಅಧಿಕಾರ ಹಾಗೂ ಉದ್ಯೋಗ ಖಾತ್ರಿಗೆ ಮರಣ ಶಾಸನ!

ಮನರೇಗಾ ಪುನರ್ ಸ್ಥಾಪನೆ, ಕರ್ನಾಟಕದ ಮೇಲಿನ ತೆರಿಗೆ ಭಯೋತ್ಪಾದನೆ, ಗ್ರಾಮೀಣ ಜನರ ಜೀವನೋಪಾಯ ಮತ್ತು ಪಂಚಾಯತಿಗಳ ಅಧಿಕಾರ ಕಸಿಯುವ ಕುತಂತ್ರ ನಿಲ್ಲುವವರೆಗೂ

**#ಗ್ರಾಮಸಂಗ್ರಾಮನಿರಂತರ!**

ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗ/ ಬ್ರಾಹ್ಮಣ ಸಮುದಾಯಗಳ ಮಾಲೀಕತ್ವ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

ಪ್ರಕಟಣೆ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಹಿಂದೂಗಳಲ್ಲಿ ಒಗ್ಗಟ್ಟಿನ ಕೊರತೆ: ಉಲ್ಲಾಸ್ ವಿಷಾಧ

ಎಚ್.ಡಿ.ಕೋಟೆ: ಒಗ್ಗಟ್ಟಿನಿಂದ ಧರ್ಮದ ಸಂರಕ್ಷಣೆ ಮಾಡುವುದು ಪ್ರತಿಯೊಬ್ಬ ಹಿಂದೂಗಳು ಜವಾಬ್ದಾರಿ ಹಾಗೂ ಕರ್ತವ್ಯ ವಾಗಿದೆ. ನಮ್ಮಲ್ಲಿನ ಒಗ್ಗಟ್ಟಿನಿಂದ ಕೊರತೆಯಿಂದಲೇ ಕೆಲವರು ದೇವರುಗಳನ್ನು ಹಾಗೂ ಹಿಂದೂಗಳನ್ನು ಅವಮಾನಿಸುತ್ತಿದ್ದಾರೆ. ಧರ್ಮದ ಸಂರಕ್ಷಣೆ ಮಾಡಬೇಕು ಎಂದು ಮಹಾನ್ ಸಂತ ಸ್ವಾಮಿ ವಿವೇಕಾನಂದರು ಈ ಹಿಂದೆ ತಿಳಿಸಿದ್ದಾರೆ ಎಂದು ಹಿಂದೂ ಜಾಗರಣಾ ವೇದಿಕೆಯ ಉಲ್ಲಾಸ್ ಹೇಳಿದರು.

ಪಟ್ಟಣದ ಹಳೆ ಆಸ್ಪತ್ರೆ ಮೈದಾನದಲ್ಲಿ ನಡೆದ ಹಿಂದೂ ಸಮಾಜೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಹಿಂದೂಗಳಲ್ಲಿ ಒಗ್ಗಟ್ಟಿನ ಪ್ರದರ್ಶನವಾಗುತ್ತಿಲ್ಲ. ಗುಜರಾತಿನಲ್ಲಿ ಸೋಮನಾಥ ಮಂದಿರವನ್ನು ಹದಿನೇಳು ಬಾರಿ ಧ್ವಂಸಗೊಳಿಸದರೂ ಸಹ ಹಿಂದೂಗಳ ಹೋರಾಟ ಹಾಗೂ ಶಕ್ತಿಯ ಫಲವಾಗಿ ಇಂದು ಸುಂದರವಾದ ದೇವಾಲಯ ನಿರ್ಮಾಣವಾಗಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಭಜರಂಗದಳ, ಆರ್ ಎಸ್ ಎಸ್, ಹಿಂದೂ ಸಮಾಜ, ಹಿಂದೂ ಜಾಗರಣ ವೇದಿಕೆ, ಹಿಂದೂ ಸಮಾಜ ಸೇರಿದಂತೆ ಅನೇಕ ಸಂಘಟನೆಗಳಿವೆ. ಹಿಂದೆ ಯಾವುದೇ ಸಂಘಟನೆಗಳು ಇಲ್ಲದಿದ್ದರೂ ಹಿಂದೂಗಳು ಒಗ್ಗಟ್ಟಾಗಿದ್ದರು. ಐದು ನೂರು ವರ್ಷಗಳ ಹಿಂದೆ ರಾಮನ ಜನ್ಮಭೂಮಿ ಕೆಡವಿ ಮಸೀದಿ ನಿರ್ಮಾಣ ಮಾಡಲಾಗಿತ್ತು. ನೂರಕ್ಕೂ ಹೆಚ್ಚು ಸಲ ಯುದ್ಧಗಳು ನಡೆದಿವೆ. ಕಾನೂನು ಸೇರಿದಂತೆ ನಾನಾ ರೀತಿಯ ಹೋರಾಟದ ಫಲವಾಗಿ ಮಸೀದಿ ನಿರ್ಮಿಸಿದ್ದ ಸ್ಥಳದಲ್ಲಿಯೇ ಇಂದು ಭವ್ಯ ಮಂದಿರ ಕಟ್ಟಲಾಗಿದೆ. ಹಿಂದೂಗಳು



ಒಗ್ಗಟ್ಟಿನಿಂದ ಇದ್ದರೆ ಎಲ್ಲವೂ ಸಾಧ್ಯ ಎಂದು ತಿಳಿಸಿದರು.

### ಅರಾಜಕತೆ ಸೃಷ್ಟಿಮಾಡಿ,

ದೇಶವನ್ನು ಒಡೆಯುವ ಹುನ್ನಾರವನ್ನು ವಿದೇಶಿ ಹಾಗೂ ಮತೀಯ ಶಕ್ತಿಗಳ ಷಡ್ಯಂತರವಿರಬಹುದು. ದೇಶದೊಳಗಿನ ದ್ರೋಹಿಗಳನ್ನು ಮಟ್ಟಹಾಕಬೇಕು. ಬೆಂಗಳೂರಿನ ಡಿ.ಜೆ.ಹಳ್ಳಿ-ಕೆ.ಜೆ.ಹಳ್ಳಿ ಘಟನೆ, ಮೈಸೂರಿನ ಉದಯಗಿರಿ ಘಟನೆಗಳಿಂದ ಕೆಟ್ಟ ಸಂದೇಶ ರವಾನೆಯಾಗುತ್ತಿದೆ. ನಿರ್ಧಾಕ್ಷಿಣ್ಯವಾಗಿ ಕಠಿಣ ಕ್ರಮ ಕೈಗೊಳ್ಳಲು ಸರ್ಕಾರಗಳು ಪೊಲೀಸ್ ಇಲಾಖೆಗೆ ಹೆಚ್ಚಿನ ಅಧಿಕಾರ ನೀಡಬೇಕು. ಸಂವಿಧಾನದ ಹಕ್ಕುಗಳ ಜೊತೆಗೆ, ರಾಷ್ಟ್ರದ ಸುರಕ್ಷತೆಯ ಕರ್ತವ್ಯಗಳನ್ನು ನಾವು ನಿಭಾಯಿಸುವ ಸ್ವಭಾವ ಬೆಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಹಿಂದೂಗಳು ಒಗ್ಗಟ್ಟಿನ ಸಂಸ್ಕೃತಿ ಮರೆತದ್ದರಿಂದ ಈ ಹಿಂದೆ ಗುಲಾಮಿತನಕ್ಕೆ ಒಳಗಾಗಿದ್ದ ಹಿಂದೂಗಳನ್ನು ಒಂದುಗೂಡಿಸಿ, ಸಂಘಟಿತರನ್ನಾಗಿ ಮಾಡಿ ರಾಷ್ಟ್ರದ ಪುನರುತ್ಥಾನಕ್ಕಾಗಿ, ಕ್ರಾಂತಿಕಾರಿ, ಸಮಾಜ ಸುಧಾರಕ, ಸ್ವತಂತ್ರ್ಯ ಹೋರಾಟಗಾರ ಡಾ.ಕೇಶವ ಬಲರಾಮ್ ಹೆಡ್ಗೆವಾರ್ ಅವರು 1925ರಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ(ಆರ್.ಎಸ್.ಎಸ್) ಸ್ಥಾಪಿಸಿದರು ಹಿಂದೂಗಳು ಒಗ್ಗಟ್ಟಾಗಿರಬೇಕು ಎಂದರು.

### ಶೋಭಯಾತ್ರೆಯಲ್ಲಿ ಕಲಾ ತಂಡಗಳು

ಪಟ್ಟಣದ ಶ್ರೀಚಾಮುಂಡೇಶ್ವರಿ ದೇವಸ್ಥಾನದಿಂದ ಕಳಸ ಹೊತ್ತ ಮಹಿಳೆಯರು ಪೂರ್ಣ ಕುಂಭ ಸ್ವಾಗತಕೋರಿದರು. ನಾದಸ್ವರ, ಮಂಗಳವಾದ್ಯದೊಂದಿಗೆ ಪಡುವಲು ವಿರಕ್ತ ಮಠದ ಶ್ರೀ ಮಹದೇವಸ್ವಾಮೀ ಜೊತೆ ಶೋಭಯಾತ್ರೆಯಲ್ಲಿ ವಿವಿಧ ಕಲಾ ತಂಡಗಳು, ದೇವರ ಹೊತ್ತ ಪಲ್ಲಕ್ಕಿ ಮೆರವಣಿಗೆಯಲ್ಲಿ ಸಾಗಿದವು. ಹಿಂದೂ ಸಮಾಜೋತ್ಸವ ಸಂಘಟನಾ ಕಾರ್ಯದರ್ಶಿ ಬಿಡಗಲು ರಾಜು, ಬಿಜೆಪಿ ತಾಲೂಕು ಅಧ್ಯಕ್ಷ ಶಂಭೇಗೌಡ, ಮುಖಂಡ ಸಿ.ಕೆ.ಗಿರೀಶ್, ರುದ್ರಪ್ಪ, ಮಂಜು, ಸಂಯೋಜಕರಾದ ಪೂರ್ಣೇಶ್, ಮುತ್ತಣ್ಣ, ಸಿ.ಎನ್.ನಾಗಣ್ಣ, ಚಂದ್ರಮೌಳೇಶ್ವರ, ಸಂತೋಷ್, ಜಯಂತ್ ಕುಮಾರ್, ರೂಪೇಶ್, ಮಹೇಶ್, ಟಿ ವೆಂಕಟೇಶ್, ನಂದೀಶ್, ಸಂತೋಷ್, ನಾಗೇಶ್, ಪ್ರಶಾಂತ್, ಪೃಥ್ವಿ ಕುಮಾರ್, ಸತೀಶ್ ಬಹದ್ದೂರ್, ಗುರುಸ್ವಾಮಿ, ಸಿದ್ದೇಶ್, ಡೈರಿ ಶ್ರೀಕಾಂತ್, ಸಿದ್ದನಾಯಕ, ವಿವೇಕಾನಂದ, ಸೋಮಾಚಾರ್, ಬಿ ಗುರುಸ್ವಾಮಿ, ಸುಧಾಕರ್, ರಾಜೇಶ್, ಬಸವರಾಜು, ಕೆ ಎನ್ ಮಹೇಶ್, ಪಳನಿ ಸ್ವಾಮಿ, ವೀರಪ್ಪ, ಪ್ರಮೋದ್, ಸೋಮೇಶ್, ವಿನೋದ್, ಚಾಮರಾಜು, ಮಹಿಳೆಯರು ಹಾಗೂ ಹಿಂದೂ ಮುಖಂಡರು ಇದ್ದರು.

## ದೇಶದ್ರೋಹಿಗಳ ಧ್ವನಿ ಕುಗ್ಗಿಸಬೇಕು

**ಫೆ.2 ರವರೆಗೆ ದೇಶದ ಎಲ್ಲ ಕಡೆ ಹಿಂದೂ ಸಮಾಜೋತ್ಸವ ಕಾರ್ಯಕ್ರಮ ನಡೆಯುತ್ತಿದ್ದು, ಹಿಂದೂಗಳು ಒಗ್ಗಟ್ಟನ್ನು ಪ್ರದರ್ಶನ ಮಾಡಲಿದ್ದಾರೆ. ಹಿಂದುಗಳ ಒಡಕಿನಿಂದ ಬೇರೆ ಧರ್ಮದ ಜನರು ಹಿಂದುಗಳ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾರೆ. ನಾವೆಲ್ಲ ಒಗ್ಗಟ್ಟಾದರೆ ಬೇರೆ ಯಾರೂ ನಮ್ಮನ್ನು ಎದುರಿಸಲು ಸಾಧ್ಯವಿಲ್ಲ. ಹಿಂದೂ ಎದ್ದಲ್ಲಿ ದೇಶ ಎದ್ದಿತ್ತು ಎಂಬ ಭಾವನೆ ಇದೆ ದೇಶಭಕ್ತರಿಗೆ ಧ್ವನಿಗೂಡಿಸಿ ದೇಶದ್ರೋಹಿಗಳ ಧ್ವನಿ ಕುಗ್ಗಿಸ ಬೇಕಿದೆ. ಬಲವಂತದ ಮತಾಂತರ ಗೋ ಹತ್ಯೆಗಳನ್ನು ನಿಲ್ಲಿಸಬೇಕಿದೆ.ಹಿಂದೂ ಎಂದರೆ ಒಂದು ಎಂದು ಅರಿವು ಮೂಡಿಸಲು ಹಿಂದೂ ಸಮಾಜೋತ್ಸವ ಮಾಡುತ್ತಿದ್ದೇವೆ ಹಿಂದೂ ಸಮಾಜೋತ್ಸವ ತಾಲೂಕು ಅಧ್ಯಕ್ಷ ಜೆ.ಬಿ.ಶಿವಸ್ವಾಮಿ ಎಂದು ತಿಳಿಸಿದರು.**

# ಮೇಲ್ವಿಚಾರಕ ಕೆಲಸಕ್ಕೂ ಸೈ ನಾಟಕ ಅಭಿನಯಕ್ಕೂ ಸೈ

ಗುಂಡ್ಲುಪೇಟೆ: ತಾಲ್ಲೂಕಿನ ಬೇಗೂರಿನ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯದ ಮೇಲ್ವಿಚಾರಕ ( ವಾರ್ಡ್‌ನ್) ರಾಗಿ ಕರ್ತವ್ಯ ನಿರ್ವಹಿಸುತ್ತಿರುವ ರಂಗಸ್ವಾಮಿ ಎಂಬುವವರು ಹಿಂದುಳಿದ ವರ್ಗದ ನಿಲಯ ಮೇಲ್ವಿಚಾರಕ ಕೆಲಸಕ್ಕೂ ಸೈ ನಾಟಕ ಅಭಿನಯಕ್ಕೂ ಸೈ ಎಂಬಂತೆ ಕಲಾವಿದರಾಗಿಯು ವೃತ್ತಿಯ ಜೊತೆಗೆ ಪ್ರವೃತ್ತಿ ಯನ್ನೂ ಮುಂದುವರೆದಿದ್ದಾರೆ



ತಮ್ಮ ಸ್ವಗ್ರಾಮ ಕುಣಿಗಲ್ ತಾಲ್ಲೂಕಿನ ಗುಣ್ಣಾಗರೆ ಗ್ರಾಮದಲ್ಲಿ ಕುರುಕ್ಷೇತ್ರ ನಾಟಕದಲ್ಲಿ ಭೀಮನ ಪಾತ್ರ ಮಾಡಿದ್ದಾರೆ, ಕೆಲಸದ ನಡುವೆ ಹಾಸ್ಟಲ್ ನಲ್ಲಿ ಬಿಡುವಿನ ಸಮಯದಲ್ಲಿ ಡೈಲಾಗ್ ಪ್ರಾಕ್ಟಿಸ್ ಮಾಡಿ, ಭೀಮನ ಪಾತ್ರ ಅವಾಹನೆ ಮಾಡಿಕೊಂಡು ಪ್ರಾಕ್ಟಿಸ್ ನಡೆಸಿ ನೇರವಾಗಿ ರಂಗಮಂದಿರದಲ್ಲಿ ಭೀಮನ ಪಾತ್ರಕ್ಕೆ ಜೀವತುಂಬಿ ಅಭಿನಯಿಸಿ ಕಲಾ ಆರಾಧಕರು ಪ್ರೇಕ್ಷಕರಿಂದ ಮೆಚ್ಚುಗೆ ಪಡೆದಿದ್ದಾರೆ.

ಈ ಬಗ್ಗೆ ಪತ್ರಿಕೆಯೊಂದಿಗೆ ಮಾತನಾಡಿದ ವಾರ್ಡನ್ ರಂಗಸ್ವಾಮಿ ಕಲೆ ಎಂಬುದು ಮನುಷ್ಯನಿಗೆ ಒಂದು ರೀತಿಯ ಚೈತನ್ಯ ನೀಡುತ್ತದೆ, ಎಷ್ಟೇ ನೋವು ಕಷ್ಟಗಳಿದ್ದರು ಬಣ್ಣ ಹಚ್ಚಿ ಜನರನ್ನು ರಂಜಿಸುವುದು ಒಂದು ಪಾತ್ರಕ್ಕೆ ಜೀವ ತಬುವ ಪ್ರವೃತ್ತಿ ಸುಲಭದಲ್ಲ ವೃತ್ತಿಯ ಜೊತೆಗೆ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಎಲ್ಲರೂ ಭಾಗಿಯಾಗಬೇಕು ಎಂಬುದು ನನ್ನ ಸಲಹೆ ಎಂದರು.

**ವೀರಮಹಾಸತಿ ಕಾದಂಬರಿ ಒಂದು ಅದ್ಭುತ ಕೃತಿ : ರೇಚಂಬಳ್ಳಿ ದುಂಡುಮಾದಯ್ಯ**

# ವೀರಮಹಾಸತಿ ಕಾದಂಬರಿ ಲೋಕಾರ್ಪಣೆ



ಚಾಮರಾಜನಗರ : ವೀರಮಹಾಸತಿ ಕಾದಂಬರಿ ಒಂದು ವಿಶೇಷತೆ ಹೊಂದಿದ್ದು ಒಂದು ಅದ್ಭುತ ಕೃತಿಯಾಗಿದೆ ಎಂದು ಸಾಹಿತಿ ರೇಚಂಬಳ್ಳಿ ದುಂಡುಮಾದಯ್ಯ ಹೇಳಿದರು.

ತಾಲೂಕಿನ ಕಾಗಲವಾಡಿಯ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ 77ನೇ ಗಣರಾಜ್ಯೋತ್ಸವ ಹಾಗೂ ಆಸರೆ ಪ್ರಕಾಶನ ಹೊರತಂದಿರುವ ಡಾ.ಶಿವಕುಮಾರ್ ಎಂ.ನಂಜಾಮೇಸ್ತ್ರಿ ರಚಿತ ವೀರಮಹಾಸತಿ ಕಾದಂಬರಿಯ ಬಿಡುಗಡೆ ಸಮಾರಂಭದಲ್ಲಿ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದರು.

ವೀರಮಹಾಸತಿ ಕಾಗಲವಾಡಿ ಗ್ರಾಮದ ದಲಿತ ಸಮುದಾಯದ ವೀರ ಮಹಿಳೆಯಾಗಿದ್ದರು. ಅವರು ಇತಿಹಾಸ ಕುರಿತು ವೀರಮಹಾಸತಿ ಕಾದಂಬರಿ ಬರೆದಿರುವವರು ಕೂಡ ಇದೆ ಗ್ರಾಮದ ಡಾ. ಶಿವಕುಮಾರ್ ರವರು. ಇದು ಹೆಮ್ಮೆ ತರುವಂತಹ ವಿಚಾರವಾಗಿದೆ. ಅಲ್ಲದೆ ಈ ಕೃತಿಯನ್ನು ಗ್ರಾಮದ ಆಸರೆ ಪ್ರಕಾಶನದ ಬಸವಣ್ಣ ಅವರು ಮುದ್ರಣ ಮಾಡಿರುವುದು ಒಂದು ವಿಶೇಷವಾಗಿದ್ದು, ಈ ಪುಸ್ತಕದಲ್ಲಿ ಒಂದು ವಿಶೇಷ ಅರ್ಥ ಅಡಗಿದೆ ಎಂದರು.ಅಧ್ಯಕ್ಷತೆ ವಹಿಸಿದ್ದ ರೋಟರಿ ಸಂಸ್ಥೆಯ ಅಧ್ಯಕ್ಷ ಕಾಗಲವಾಡಿ ಚಂದ್ರು ಮಾತನಾಡಿ, ಶಿವಕುಮಾರ್ ಎಂ.ನಂಜಾಮೇ ಅವರು ಬರೆದಿರುವ ವೀರಮಹಾಸತಿ ಕಾದಂಬರಿ ಕಾಗಲವಾಡಿ ಗ್ರಾಮದ ಇತಿಹಾಸ ಒಳಗೊಂಡಿರುವ ಒಂದು ಅದ್ಭುತ ಕಾದಂಬರಿ ಆಗಿದೆ ಎಂದರು.

ಕಾಗಲವಾಡಿ ಗ್ರಾಮದಲ್ಲಿ ನಾವು ಚಿಕ್ಕವರಾಗಿದ್ದಾಗ, ನಮ್ಮ ಹಿರಿಯರು ಮೇಲ್ಜಾತಿಯ ಮಾಸ್ತಿಗುಡಿ ದೇವಸ್ಥಾನಕ್ಕೆ ಹೋಗಿ ಪೂಜೆ ಸಲ್ಲಿಸುತ್ತಿದ್ದರು ಆ ಸಂದರ್ಭದಲ್ಲಿ ಏಕೆ ಎಂಬ ಪ್ರಶ್ನೆ ಕಾಡುತ್ತಿರಲಿಲ್ಲ ಆದರೆ ಈ ಐತಿಹಾಸಿಕ ಸಂಗತಿಗಳನ್ನು ತಿಳಿದಾಗ ಮೇಲ್ಜಾತಿಯ ದೇವಸ್ಥಾನಕ್ಕೆ ನಮ್ಮನ್ನ ಬಿಡುತ್ತಿದ್ದ ಸಂದರ್ಭ ಪ್ರಸ್ತುತ ಅರ್ಥವಾಗುವ ರೀತಿಯಲ್ಲಿ ಈ ಗ್ರಂಥವನ್ನು ರಚಿಸಿದ್ದಾರೆ ಎಂದರು.

# ಭೀಮನಕೊಲ್ಲಿ ಮಹದೇಶ್ವರ ರಥೋತ್ಸವ

## ವಿಜೃಂಭಣೆಯಿಂದ ಜರುಗಿದ ಜಾತ್ರಾ ಮಹೋತ್ಸವ | ರಾತ್ರಿ ಸಡಗರದ ತೆಪ್ಪೋತ್ಸವ

ಎಚ್.ಡಿ.ಕೋಟೆ: ತಾಲೂಕಿನ ಪ್ರಸಿದ್ಧ ಭೀಮನಕೊಲ್ಲಿ ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾ ನದ ಮಹಾ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ತಾಲ್ಲೂಕಿನ ಭೀಮನಕೊಲ್ಲಿ ಮಹದೇಶ್ವರ ದೇವಸ್ಥಾನದಲ್ಲಿ ಬೆಳಿಗ್ಗೆ 6 ಗಂಟೆಗೆ ಸಹಸ್ರಬಿಲ್ವಾರ್ಚನೆ, 9 ಗಂಟೆಗೆ ಮಹಾಮಂಗಳಾರತಿ ನಂತರ 10ಗಂಟೆಗೆ ರಥದ ಮೇಲಿನ ಹುಲಿವಾಹನದಲ್ಲಿ ಪುಷ್ಪಗಳಿಂದ ಅಲಂಕರಿಸಿದ್ದ ಉತ್ಸವ ಮೂರ್ತಿಯನ್ನು ಮಂಗಳ ವಾದ್ಯ ಮತ್ತು ಬಸವರಾಜು ತಂಡದ ವೀರಗಾಸೆ ಕುಣಿತದೊಂದಿಗೆ ದೇವಸ್ಥಾನದ ರಥಬೀದಿಯಲ್ಲಿ ಮೆರವಣಿಗೆ ನಡೆಸಲಾಯಿತು. ಭಕ್ತಾಧಿಗಳು ರಥೋತ್ಸವವನ್ನು ಭಕ್ತಿ ಭಾವದಿಂದ ಕಣ್ತುಂಬಿಕೊಂಡು ಭಕ್ತಿ ಪರಾವಶರಾಗಿ ಉಘೆ ಮಾದಪ್ಪ, ಉಘೇ ಮಾದಪ್ಪ ಎಂದು ಕೂಗಿದರು. ಮೂರು ದಿನಗಳ ಜಾತ್ರಾ ಮಹೋತ್ಸವವು

ಜ 26 ಸೋಮವಾರದಿಂದ ಪ್ರಾರಂಭವಾಗಿ ಬೆಳಿಗ್ಗೆ 6ಗಂಟೆಗೆ ಹೋಮ, ಮಹಾರುದ್ರಾಭಿಷೇಕ, 9ಗಂಟೆಗೆ ಮಹಾ ಮಂಗಳಾರತಿ, ರಾತ್ರಿ 12 ಗಂಟೆಗೆ ಹಾಲರವಿ ಸೇವೆ, ದೇವರ ಮೆರವಣಿಗೆ, ಕೊಂಡೊತ್ಸವ. ಜ 27 ರಂದು ಸಹಸ್ರ ಬಿಲ್ವಾರ್ಚನೆ, 9ಗಂಟೆಗೆ ಮಹಾ ಮಂಗಳಾರತಿ, ರಾತ್ರಿ12ಗಂಟೆಗೆ ಆನೆ ವಾಹನೋತ್ಸವ

ಜ 28 ಬೆಳಿಗ್ಗೆ 6ಗಂಟೆಗೆ ಸಹಸ್ರ ಬಿಲ್ವಾರ್ಚನೆ, ಇತರೆ ಪೂಜಾ ಕಾರ್ಯಕ್ರಮಗಳು, ಹಾಗೂ ಬೆಳಿಗ್ಗೆ 9ಗಂಟೆಗೆ ಮಹಾಮಂಗಳಾರತಿ, ಸಂಜೆ 6-00 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು



ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾ ಸ್ವಾಮಿಗಳು ದಿವ್ಯದಾನಿಧ್ಯ ವಹಿಸಲಿದ್ದಾರೆ. ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವರಾದ ಹೆಚ್.ಸಿ. ಮಹದೇವಪ್ಪ, ಅಧ್ಯಕ್ಷತೆಯನ್ನು ಶಾಸಕ ಅನಿಲ್ ಚಿಕ್ಕಮಾದು ವಹಿಸಲಿದ್ದಾರೆ. ಸಂಸದ ಸುನೀಲ್ ಬೋಸ್ ಹಾಗೂ ವಿಧಾನ ಪರಿಷತ್ತಿನ ಸದಸ್ಯರು ಭಾಗವಹಿಸಲಿದ್ದಾರೆ.

### ರಾತ್ರಿ 12ರ ನಂತರ ತೆಪ್ಪೋತ್ಸವ,

ದೇವಸ್ಥಾನದ ಮೂರು ಭಾಗಗಳಲ್ಲಿ ಕಬಿನಿ ಹಿನ್ನೀರು ಆವರಿಸಿದ್ದು ದ್ವೀಪದ ನಡುವೆ ದೇವಸ್ಥಾನ ಕಂಗೊಳಿಸುತ್ತದೆ. ದೇವಸ್ಥಾನವನ್ನು ಹಸಿರು ತಳಿರು ತೋರಣ, ವಿದ್ಯುತ್ ದೀಪಾಲಾಂಕರದಿಂದ ಅಲಂಕರಿಸಲಾಗಿದೆ.

ಜಾತ್ರೆಗೆ ಬರುವ ಭಕ್ತರಿಗೆ ಅನುಕೂಲಕ್ಕೆ ರಾಜ್ಯ ಸಾರಿಗೆ ಸಂಸ್ಥೆ ವತಿಯಿಂದ ಹೆಚ್ಚುವರಿ ಬಸ್ ಸಂಪರ್ಕವನ್ನು ಹೆಚ್.ಡಿ.ಕೋಟೆ, ಸರಗೂರು ಮತ್ತು ಮೈಸೂರು ನಗರದಿಂದ ಕಲ್ಪಿಸಲಾಗಿದೆ.

ಕ್ಷೇತ್ರದ ಕಬಿನಿ ಹಿನ್ನೀರಿನ ಮತ್ತೊಂದು ಬದಿಯಲ್ಲಿ ಇರುವ ಕಾರಾಪುರ, ಎನ್. ಬೆಳತ್ತೂರು, ಮಗ್ಗೆ, ಮಳಲಿ, ಕೆ.ಆರ್.ಪುರ ಮುಂತಾದ ಗ್ರಾಮಗಳಿಂದ ಜನರು, ಕ್ಷೇತ್ರಕ್ಕೆ ಬರಬೇಕಾದರೆ ಕಬಿನಿ ಹಿನ್ನೀರಿನ ಮೂಲಕ ಬರುವುದಕ್ಕೆ. ಜನತೆಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಕಬಿನಿ ಹಿನ್ನೀರಿನ ಮೂಲಕ ಬರಲು ಲೋಕೋಪಯೋಗಿ ಒಳನಾಡು ಜಲಸಾರಿಗೆ ಇಲಾಖೆಯಿಂದ ದೇವಸ್ಥಾನಕ್ಕೆ ಯಾಂತ್ರೀಕೃತ ಬೋಟ್ ವ್ಯವಸ್ಥೆ ಕಲ್ಪಿಸಲಾಗಿದೆ. ಇದರಿಂದ ಜನತೆಗೆ ಅನುಕೂಲವಾಗಿದೆ. ಬೋಟ್ ಸಂಚಾರ ಬೆಳಗಿನ 7 ಗಂಟೆಯಿಂದ ಸಂಜೆ 6 ಗಂಟೆ ತನಕ ಮಾತ್ರ ಇರುತ್ತದೆ. ಜಾತ್ರಾ ಮಹೋತ್ಸವದ ಅಂಗವಾಗಿ ತೆಪ್ಪೋ ತ್ಸವ, ದನಗಳ ಪ್ರದರ್ಶನ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಜಾತ್ರಾ ಮಹೋತ್ಸವದ ದಿನಗಳಲ್ಲಿ ಆಗಮಿಸುವ ಸಾವಿರಾರು ಭಕ್ತಾದಿಗಳಿಗೆ ತೊಂದರೆಯಾಗದಂತೆ ಮೂರು ದಿನಗಳ ಕಾಲ ಅನ್ನಸಂತರ್ಪಣೆ ನಡೆಸಲು ವಿಶೇಷ ಶಾಮಿಯಾನ ವ್ಯವಸ್ಥೆ ಕಲ್ಪಿಸಿದೆ. ವಿವಿಧ ಭಾಗಗಳಿಂದ 10 ರಿಂದ 15 ಸಾವಿರಕ್ಕೂ ಹೆಚ್ಚು ಭಕ್ತರು ಆಗಮಿಸುತ್ತಾರೆ ನೀರೀಕ್ಷೆ ಇದ್ದು, ದೇವರ ದರ್ಶನಕ್ಕೆ ಸರತಿ ಸಾಲು ಮಾಡಲಾಗಿದ್ದು, ಅಂತರಸಂತೆ ಠಾಣೆಯ ಆರಕ್ಷಕ ಉಪನಿರೀಕ್ಷಕ ಚಂದ್ರಹಾಸ ನೇತೃತ್ವದಲ್ಲಿ ಬಂದೋಬಸ್ತ್ ಮಾಡ ಲಾಗಿದೆ. ಭೀಮನಕೊಲ್ಲಿ ಮಹದೇಶ್ವರಸ್ವಾಮಿ ದೇವ ಸ್ಥಾನ ಸಮಿತಿ ಅಧ್ಯಕ್ಷ ಎಂ.ಪಿ.ಎಸ್.ಮೂರ್ತಿ, ಉಪಾಧ್ಯಕ್ಷ ಗುರುಮಲ್ಲಪ್ಪ, ಕಾರ್ಯದರ್ಶಿ ಎಂ.ಎನ್.ಜಗದೀಶ್, ಗೌರವಾಧ್ಯಕ್ಷ ಡಿ.ಸುಂದರ ದಾಸ್, ಸದಸ್ಯರಾದ ಸುಬ್ಬಣ್ಣ, ಜೆ.ಪಿ.ಶಿವರಾಜು, ಮಳಲಿ ಗುರುಮೂರ್ತಿ, ದಯಾನಂದ, ಬಸವರಾಜು, ವೀರಣ್ಣ, ಬಿ.ಎಚ್.ನಂಜಪ್ಪ, ಮಲ್ಲಿಕಾರ್ಜುನ್, ಗುರುಲಿಂಗಪ್ಪ , ಬಿ.ವಿ.ಮಾದಪ್ಪ, ರಾಜಣ್ಣ ಸೇರಿದಂತೆ ಅನೇಕರಿದ್ದರು.

# ಸೌಹಾರ್ದ ಸಹಕಾರಿಗಳಿಗೆ ತರಬೇತಿ ಶಿಬಿರ

ಮೈಸೂರು: ನಗರದ ಜೆಎಲ್ ಬಿ ರಸ್ತೆಯಲ್ಲಿರುವ ಇಂಜಿನಿಯರ್ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತವತಿಯಿಂದ ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಯಲ್ಲಿ 2024-25ನೇ ಸಾಲಿನಲ್ಲಿ ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷ ಮತ್ತು ಮುಖ್ಯ ಕಾರ್ಯನಿರ್ವಾಹಕರಿಗೆ ವಿಷಯಾಧಾರಿತ ತರಬೇತಿ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಮಾಜಿ ಅಧ್ಯಕ್ಷ ಹಾಗೂ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯ ಹೆಚ್.ವಿ.ರಾಜೀವ್ ಮಾತನಾಡಿ, ಈ ಭಾಗದಲ್ಲಿ ಇರುವುದು ಬಹುತೇಕ ಮೈಕ್ರೋ ಸಹಕಾರ ಸಂಸ್ಥೆಗಳಿದ್ದು, ಆರಂಭದಲ್ಲಿ ಬಹಳ ಉತ್ಸಾಹದಿಂದ ಪ್ರಾರಂಭ ಮಾಡುತ್ತಾರೆ. ಕಡಿಮೆ ಬಂಡಾವಳದಲ್ಲಿ ಸಾಲ-ಸೌಲಭ್ಯ ನೀಡಲು ಮಾಡಲಾಗುತ್ತದೆ. ಇದರಿಂದ ಆರಂಭದಲ್ಲೇ ಮುಗ್ಗರಿಸುತ್ತವೆ. ಆದ್ದರಿಂದ ಮೊದಲು ಷೇರುದಾರರ ಸಂಖ್ಯೆ ಹೆಚ್ಚಿಸಬೇಕು. ಠೇವಣಿ ಸಂಗ್ರಹಗಬೇಕು. ಸಾಲ ವಸೂಲಿ ಮಾಡುವುದು ಸೇರಿದಂತೆ ಇನ್ನಿತರೆ ಅವಧಿಯಲ್ಲಿ ಸೂಕ್ಷ್ಮವಾಗಿ ಯೋಚನೆ ಮಾಡಿ ಕಾರ್ಯ



ನಿರ್ವಹಿಸಬೇಕಾಗುತ್ತದೆ. ಸಾಲ ನೀಡುವಾಗಲೇ ಎಚ್ಚರ ವಹಿಸಬೇಕು. ದಾಖಲೆಗಳ ಪರಿಶೀಲನೆಯಾಗಬೇಕು. ಷೇರು ಸಂಗ್ರಹ ಹೆಚ್ಚಿಸಿ, ಠೇವಣಿ ಹಣವನ್ನು ಹೆಚ್ಚಿಸಿ ನಂತರ ಸಾಲ-ಸೌಲಭ್ಯ ನಿಡುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಬೇಕು. ಸಾರ್ವಜನಿಕ ಸೇವೆಯನ್ನು ಗುಣಾತ್ಮಕವಾಗಿರಬೇಕು. ನಷ್ಟ ದಿಂದ ಪಾರು ಮಾಡಿ ಲಾಭದತ್ತ ನಡೆಸುವುದು ಅವಶ್ಯವಾಗಿರುತ್ತದೆಂದರು.

ನಷ್ಟದಿಂದ ಮೇಲೆ ಬಂದರೆ ಸ್ಥಾಪನೆಯ ಉದ್ದೇಶವನ್ನು ಈಡೇರಿಸಲು ಅನುಮೂಲವಾಗುತ್ತದೆ. ಆದ್ದರಿಂದ ಅಧ್ಯಕ್ಷರು ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳು ಜವಾಬ್ದಾರಿಯಿಂದ ಕೆಲಸಮಾಡಬೇಕಿದೆ ಎಂದು ಎಚ್ಚರಿಸಿದರು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ನಿರ್ದೇಶಕ ಎಸ್.ಕೆ. ಮಂಜುನಾಥ್ ಅಧ್ಯಕ್ಷತೆ ವಹಿಸಿದ್ದರು. ಸಹಕಾರ ಸಂಘಗಳ ಲೆಕ್ಕಪರಿಶೋಧಕಾ ಜಂಟಿ ನಿರ್ದೇಶಕಿ ಎಸ್.ಎಂ.ಶಶಿರೇಖಾ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಮಾಜಿ ನಿರ್ದೇಶಕ ಭಾಸ್ಕರ್ ಹೆಗಡೆ ಕಾಗೇರಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಪ್ರಾಂತೀಯ ಅಧಿಕಾರಿ ಗುರುಪ್ರಸಾದ್ ಬಂಗೇರ, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಆರ್.ಎಸ್.ಸುರೇಶ, ಎನ್.ಬಲರಾಮ್ ಮತ್ತಿತರರಿದ್ದರು.

# ನಾಳೆ ಮೈಸೂರಿನಲ್ಲಿ ಸೌಹಾರ್ದತೆಗೆ ನಡಿಗೆ

ಮೈಸೂರು: ಮಹಾತ್ಮ ಗಾಂಧಿ ಹುತಾತ್ಮರಾದ ಜ.30 ರಂದು ಸಾಂಸ್ಕೃತಿಕನಗರಿ ಮೈಸೂರು ನಗರದಲ್ಲಿ ಸೌಹಾರ್ದ ನಡಿಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಈ ಕುರಿತು ನಗರದ ಪತ್ರಕರ್ತರ ಭೌನದಲ್ಲಿ ಸುದ್ದಿಗೋಷ್ಠಿ ನಡೆಸಿದ ಸೌಹಾರ್ದ ಕರ್ನಾಟಕದದ ಸಂಯೋಜಕಪ್ರೊ. ಕಾಳಚನ್ನೇಗೌಡ, ಜಾತಿ ಮತಗಳ ಹೆಸರಿನಲ್ಲಿ ಸಮಾಜದ ಶಾಂತಿ ಸಹಭಾಳ್ವೆಯನ್ನು ಕದಡುವ ಸಂಕುಚಿತವಾದಿ ಛಿದ್ರಕಾರಿ ಶಕ್ತಿಗಳು ಸಮಾಜದಲ್ಲಿ ಮೇಲುಗೈ ಸಾಧಿಸುತ್ತಿರುವುದು ಆಂತಕ ಮೂಡಿಸಿದೆ ಎಂದು ತಿಳಿಸಿದರು.

ರಾಷ್ಟ್ರಕವಿ ಕುವೆಂಪು ಅವರು ಬಣ್ಣಿಸಿದಂತೆ ಕರ್ನಾಟಕ ಮತ್ತು ದೇಶವನ್ನು ಸರ್ವ ಜನಾಂಗದ ಶಾಂತಿಯ ತೋಟವಾಗಿ ಉಳಿಸಿಕೊಳ್ಳುವ ನಿಟ್ಟಿನಲ್ಲಿ ನಾವು ನಮ್ಮ ಹೊಣೆಗಾರಿಕೆಯನ್ನು ನಿರ್ವಹಿಸಬೇಕಿದೆ. ಐಕ್ಯತೆಗಾಗಿ, ಕೋಮು ಸೌಹಾರ್ದದ ಮೌಲ್ಯಗಳಿಗಾಗಿ ಜೀವ ತೆತ್ತವರು ಮಹಾತ್ಮ ಗಾಂಧಿ. ಈ ಹಿನ್ನಲ್ಲೆಯಲ್ಲಿ ಸೌಹಾರ್ದ ನಡಿಗೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ನಗರದ ಸಂತ ಫಿಲೋಮಿನಾಸ್ ಚರ್ಚ್‌ನಿಂದ ಸೌಹಾರ್ದ ನಡಿಗೆ ಆರಂಭಗೊಂಡು ಅಜಾಮ್ ಪಾರ್ಕ್, ಅಶೋಕ ರಸ್ತೆ ಮೂಲಕ ಟೌನ್ ಹಾಲ್‌ನ



ಅಂಬೇಡ್ಕರ್ ಪ್ರತಿಮೆವರೆಗೆ ಪಾದಯಾತ್ರೆ ನಡೆಯಲಿದ್ದು, ಚಿಕ್ಕಗಡಿಯಾರದಲ್ಲಿ ಸೌಹಾರ್ದ ಗೀತಗಾಯನ, ಭಾಷಣ ನಡೆಯಲಿದೆ. ಪ್ರಗತಿಪರ ಸಂಘಟನೆಗಳು, ಕರ್ನಾಟಕ ರಾಜ್ಯ ರೈತ ಸಂಘ, ಕರ್ನಾಟಕ ಪ್ರಾಂತ ರೈತ ಸಂಘ, ಕೇಂದ್ರ ಕಾರ್ಮಿಕ ಸಂಘಟನೆಗಳು, ದಲಿತ ಸಂಘರ್ಷ ಸಮಿತಿ, ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘ, ದಲಿತ ವಿದ್ಯಾರ್ಥಿ ಒಕ್ಕೂಟ, ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಭಾರತ ವಿದ್ಯಾರ್ಥಿ ಫೆಡರೇಷನ್, ಇನ್ಸಾಫ್ ಮೈಸೂರು, ಕನ್ನಡ ಪರ ಸಂಘಟನೆಗಳು, ಸಮುದಾಯ ಮೈಸೂರು, ಹವ್ಯಾಸಿ ರಂಗ ತಂಡಗಳು ಭಾಗಿಯಾಗಲಿವೆ. ಮಾಧ್ಯಮಗೋಷ್ಠಿಯಲ್ಲಿ ಸಂಯೋಜಕರಾದ ಜಗದೀಶ್ ಸೂರ್ಯ, ಸವಿತ ಪ.ಮಲ್ಲೇಶ್, ನೂರ್ ಮರ್ಚೆಂಟ್, ವರಳ್ಳಿ ಆನಂದ್, ಗಜೇಂದ್ರ ಚಿನ್ನಸ್ವಾಮಿ, ಡಿ.ಅಭಿ ಇತರರು ಹಾಜರಿದ್ದರು.

**ಕಪ್ಪು ಪಟ್ಟಿ ಧರಿಸಿ ನಾನಾ ಘೋಷಣೆ ಕೂಗಿದ ಸೇನಾಪಡೆಯ ಕಾರ್ಯಕರ್ತರು**

# ಅಂಚೆ ಕಚೇರಿಗಳಲ್ಲಿ ಕನ್ನಡ ಬಳಕೆಗೆ ಕನ್ನಡ ಸೇನಾಪಡೆ ಆಗ್ರಹ

ಮೈಸೂರು: ಅಂಚೆ ಕಚೇರಿಗಳಲ್ಲಿ ಅಂಚೆ ಕಚೇರಿಗಳ ಹಣ ತುಂಬುವ ಚಲನ್ ಗಳಲ್ಲಿ ಕನ್ನಡ ಭಾಷೆಯ ಚಲನ್‌ಗಳನ್ನು ಮುದ್ರಣ ಮಾಡುವಂತೆ ಆಗ್ರಹಿಸಿ ಕರ್ನಾ ಟಕ ಸೇನಾ ಪಡೆ ಕಾರ್ಯಕರ್ತರು ಪ್ರತಿಭಟಿಸಿದರು.

ನಗರದ ಪ್ರಧಾನ ಅಂಚೆ ಕಚೇರಿ ಮುಂಭಾಗದಲ್ಲಿ ಕಪ್ಪು ಪಟ್ಟಿ ಧರಿಸಿ ನಾನಾ ಘೋಷಣೆ ಕೂಗಿದ ಸೇನಾಪಡೆಯ ಕಾರ್ಯಕರ್ತರು ತಮ್ಮ ಆಕ್ರೋಶ ಹೊರಹಾಕಿದರು. ಸೇನಾಪಡೆಯ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ ಮಾತನಾಡಿ, ಅಂಚೆ ಕಚೇರಿಗಳಲ್ಲಿ ಗ್ರಾಹಕರು ಹಣ ಕಟ್ಟುವ ಉಳಿತಾಯ ಖಾತೆ, ಆರ್ ಡಿ, ಪಿಪಿಎಫ್ ಹಾಗೂ ಅಂಚೆ ಕಚೇರಿಯ ವಿವಿಧ ಯೋಜನೆಗಳಲ್ಲಿ ತೊಡಗಿಸಿರುವ ಹಣವನ್ನು ಅವಧಿ ಪೂರ್ಣವಾದ ನಂತರ ಹಿಂಪಡೆಯುವ ಯಾವುದೇ ರೀತಿಯ ಅಂಚೆ ಕಚೇರಿಯ ಚಲನ್ ಗಳು ಕನ್ನಡದಲ್ಲಿ ಇಲ್ಲದಿರುವುದು ಅತ್ಯಂತ ಖಂಡನೀಯ. ಚಲನ್ ನ ಒಂದು



ಭಾಗದಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಹಾಗೂ ಮತ್ತೊಂದು ಭಾಗದಲ್ಲಿ ಹಿಂದಿಯಲ್ಲಿ ಮಾತ್ರ ಮುದ್ರಿತವಾಗಿರುವುದು ಕನ್ನಡಿಗರಿಗೆ ಅತ್ಯಂತ ನೋವಿನ ಸಂಗತಿ. ಇದು ಕನ್ನಡ ವಿರೋಧಿ ಧೋರಣೆಯಾಗಿದೆ. ಇದರಿಂದ ಹಿಂದಿ ಹಾಗೂ ಇಂಗ್ಲೀಷ್ ಬಾರದ ಸ್ಥಳೀಯ ಕನ್ನಡಿಗರು ಚಲನ್ ತುಂಬಲು ಬೇರೆಯ ವರನ್ನು ಆಶ್ರಯಿಸಬೇಕಾಗಿರುವುದು, ಗೋಗರೆಯ ಬೇಕಾಗಿರುವುದು ದುರದೃಷ್ಟಕರ ಸಂಗತಿಯಾಗಿದೆ ಎಂದರು.

ತಮಿಳುನಾಡಿನಲ್ಲಿ ಒಂದು ಭಾಗದಲ್ಲಿ ಇಂಗ್ಲಿಷ್ ಮತ್ತೊಂದು ಭಾಗದಲ್ಲಿ ತಮಿಳು ಭಾಷೆಯಲ್ಲಿ ಚಲನ್ ಮುದ್ರಣವಾಗಿರುತ್ತದೆ. ಒಕ್ಕೂಟದ ವ್ಯವಸ್ಥೆಯಲ್ಲಿ ಪಕ್ಕದ ತಮಿಳುನಾಡಿನಲ್ಲಿ ತಮಿಳು ಭಾಷೆಯಲ್ಲಿ ಚಲನ್ ಮುದ್ರಿತವಾಗಿರುವಾಗ ನಮ್ಮ ರಾಜ್ಯದಲ್ಲಿ ಏಕೆ ಚಲನ್ ಕನ್ನಡದಲ್ಲಿ ಮುದ್ರಿತವಾಗಿಲ್ಲ, ರಾಜ್ಯ ಸರ್ಕಾರ, ರಾಜ್ಯದ ಮುಖ್ಯಮಂತ್ರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮೌನವೇಕೆ? ಈ ಕೂಡಲೇ ಕನ್ನಡದಲ್ಲಿ ಚಾಲನ್‌ಗಳನ್ನು ಮುದ್ರಿಸಬೇಕೆಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಗೋಲ್ಡನ್ ಸುರೇಶ್, ಪ್ರಭುಶಂಕರ್, ಪ್ರಜೀಶ್, ಕೃಷ್ಣಪ್ಪ, ಡಾ. ಮೊಗಣ್ಣಾಚಾರ್, ಬೋಗಾದಿ ಸಿದ್ದೇಗೌಡ, ಶಿವಲಿಂಗಯ್ಯ, ಸಿಂಧುವಳ್ಳಿ ಶಿವಕುಮಾರ್, ನೇಹ, ಡಾ. ನರಸಿಂಹೇಗೌಡ, ಭಾಗ್ಯಮ್ಮ, ಮಂಜುಳಾ, ಜ್ಯೋತಿ, ಗೀತಾಗೌಡ, ಇಂದಿರಾ, ಸುಜಾತಾ, ರಾಧಾಕೃಷ್ಣ, ವಾಣಿ, ಗೀತಾ, ತಾಯೂರು ಗಣೇಶ್, ಬಸವರಾಜು , ಪ್ರಭಾಕರ್, ಶಿವರಾಂ, ಶ್ರೀನಿವಾಸ್ , ಅಶೋಕ್, ನಾರಾಯಣಗೌಡ, ರಘು ಅರಸ್, ದರ್ಶನ್ ಗೌಡ, ತ್ಯಾಗರಾಜ್, ರವಿ ನಾಯಕ್ ಇನ್ನಿತರರು ಉಪಸ್ಥಿತರಿದ್ದರು.

# ಬೊಮ್ಮಲಾಪುರದಲ್ಲಿ ವಾಸದ ಮನೆಗೆ ನುಗ್ಗಿದ ಕಡವೆ

ಗುಂಡ್ಲುಪೇಟೆ: ತಾಲ್ಲೂಕಿನ ಬೊಮ್ಮಲಾಪುರ ಗ್ರಾಮದ ದೊರೆ ಎಂಬುವವರ ವಾಸದ ಮನೆಗೆ ಮಂಗಳವಾರ ಮುಂಜಾನೆ ಕಡವೆ ಯೊಂದು ನುಗ್ಗಿದೆ ಗಾಬರಿಗೊಂಡ ಮನೆಯವರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ,ನಂತರ ಅರಣ್ಯ ಇಲಾಖೆ ಸಿಬ್ಬಂದಿಗಳು ಕಡವೆ ಮರಿ ಹಿಡಿದು ಜೀಪಿನಲ್ಲಿ ಕೊಂಡೊಯ್ದು ಅರಣ್ಯಕ್ಕೆ ಬಿಟ್ಟಿರುವ ಘಟನೆ ನಡೆದಿದೆ. ಸದ್ಯ ಕಡವೆ ಕುಣಿದಾಡಿ ಮನೆಯ ಟಿವಿ, ಸೋಕೇಸ್ ಗೆ ಹಾನಿ ಮಾಡದೆ ಇರುವುದರಿಂದ ಹಾನಿ ತಪ್ಪಿದಂತಿದೆ ಹಿರಿಯ ಅಧಿಕಾರಿಗಳ ಸೂಚನೆಯಂತೆ ಕುಂದಕೆರೆ ಅರಣ್ಯ ವಲಯ ಸಿಬ್ಬಂದಿಗಳಾದ ಮಂಜುನಾಥ್, ಕಿರಣ್ ರವರು ಕಡವೆ ಯನ್ನು ಹಿಡಿದು ಕಾಡಿಗೆ ಬಿಟ್ಟಿದ್ದಾರೆ.



## ಸಂಕ್ಷಿಪ್ತ ಸುದ್ದಿ

### ಫೆ.1 ರಂದು ಮಡಿವಾಳ ಮಾಚಿದೇವ ಜಯಂತಿ

**ಮೈಸೂರು:** ಕನ್ನಡ ಮತ್ತು ಸಂಸ್ಕೃತ ಇಲಾಖೆ, ಮೈಸೂರು ಮಹಾನಗರ ಪಾಲಿಕೆ ಹಾಗೂ ಮಡಿವಾಳ ಮಾಚಿದೇವ ಜಯಂತ್ಯೋತ್ಸವ ಸಮಿತಿ ವತಿಯಿಂದ ಫೆ.1 ರಂದು ಮಡಿವಾಳ ಮಾಚಿದೇವ ಜಯಂತಿಯನ್ನು ಬೆಳಗ್ಗೆ 10–30 ಗಂಟೆಗೆ ಕಲಾಮಂದಿರದಲ್ಲಿ ಆಯೋಜಿಸಲಾಗುತ್ತದೆ. ಬೆಳಗ್ಗೆ 9 ಗಂಟೆಗೆ ಅರಮನೆಯ ಕೋಟೆ ಶ್ರೀಆಂಜನೇಯಸ್ವಾಮಿ ದೇಸ್ಥಾನದ ಮುಂಭಾಗದಿಂದ ಕಲಾಮಂದಿರದ ವರೆಗೆ ಮೆರವಣಿಗೆ ಜರುಗಲಿದ್ದು, ಮಧ್ಯಾಹ್ನ 12–30 ಗಂಟೆಗೆ ವೇದಿಕೆ ಕಾರ್ಯಕ್ರಮ ಪ್ರಾರಂಭವಾಗುತ್ತದೆ.

ಮುಖ್ಯ ಮಂತ್ರಿಗಳಾದ ಸಿದ್ದರಾಮಯ್ಯನವರು ಹಾಗೂ ಉಕ್ಕು ಮತ್ತು ಬೃಹತ್ ಕೈಗಾರಿಕಾ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿಯವರ ಘನ ಉಪಸ್ಥಿತಿಯಲ್ಲಿ, ಜಿಲ್ಲೆ ಉಸ್ತುವಾರಿ ಸಚಿವರು ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಚಿವರಾದ ಡಾ.ಹೆಚ್.ಸಿ. ಮಹದೇವಪ್ಪ ಅವರು ಕಾರ್ಯಕ್ರಮದ ಉದ್ಘಾಟನೆ ಮಾಡಲಿದ್ದಾರೆ. ಚಾಮರಾಜ ಕ್ಷೇತ್ರದ ಶಾಸಕರಾದ ಕೆ. ಹರೀಶ್ ಗೌಡರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

### 18 ವರ್ಷದೊಳಗಿನವರಿಗೆ ಬಾಲಪರಾಧಿಯಡಿ ಸಮಾನ ಶಿಕ್ಷೆ

**ಮಂಡ್ಯ:** 18 ವರ್ಷದೊಳಗಿನ ಗಂಡಾಗಲಿ ಅಥವಾ ಹೆಣ್ಣು ಮಕ್ಕಳಾಗಲಿ ತಪ್ಪು ಮಾಡಿದಾಗ ಬಾಲಪರಾಧಿಯಡಿ ಸಮಾನ ಶಿಕ್ಷೆ ಆಗಲಿದೆ ಎಂದು ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗಂಗಾಧರಸ್ವಾಮಿ ಎಸ್.ಈ. ಹೇಳಿದರು.

ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ಮಕ್ಕಳ ರಕ್ಷಣಾ ನಿರ್ದೇಶನಾಲಯ ಬೆಂಗಳೂರು, ಸೆಂಟ್ ಜೋಸೆಫ್ ಕಾನ್ವೆಂಟ್ ಮತ್ತು ಕಾಲೇಜು ಆಫ್ ಟೀಚರ್ ಎಜುಕೇಶನ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ನಗರದ ಸೇಂಟ್ ಜೋಸೆಫ್ ಕಾಲೇಜು ಸಭಾಂಗಣದಲ್ಲಿ ಬಾಲ್ಯ ವಿವಾಹ ಮುಕ್ತ ಭಾರತ ಅಭಿಯಾನ ಅಂಗವಾಗಿ ಬಾಲ್ಯ ವಿವಾಹ ಪೋಕ್ಸೋ ಕಾಯ್ದೆ ಮಕ್ಕಳ ಸುರಕ್ಷತೆ ಹಾಗೂ ಮಕ್ಕಳ ನ್ಯಾಯ ಕಾಯ್ದೆ 2015ರ ಕುರಿತು ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಿ ಮಾತನಾಡಿದರು.

ವಿದ್ಯಾರ್ಥಿ ದಿಸೆಯಲ್ಲಿ ಶಿಕ್ಷಕರು ಮಕ್ಕಳಿಗೆ ತಪ್ಪು ಮಾಡಿದಾಗ ಅದನ್ನು ತಿದ್ದುವ ಕೆಲಸ ಮಾಡಿದರೆ ಆ ಮಕ್ಕಳು ಮುಂದೆ ಉತ್ತಮ ಪ್ರಜೆಯಾಗಿ ಬೆಳೆಯಲು ಸಹಕಾರಮಾಡಿದಂತಾಗುತ್ತದೆ. ಈ ದೇಶ ನಿಂತಿರುವುದು ಯುವಶಕ್ತಿ ಆಧಾರದ ಮೇಲೆ ಮುಂದೆ ಬರುವ ಯುವಶಕ್ತಿಯನ್ನು ತಯಾರು ಮಾಡುವ ಮಾದರಿ ಶಿಕ್ಷಕರಾಗಿ ಎಂದು ಸಲಹೆ ನೀಡಿದರು.

ಸಂಪನ್ಮೂಲ ವ್ಯಕ್ತಿ ರೋಹಿತ್ ಮಾತನಾಡಿ, ಮಕ್ಕಳು ತಪ್ಪು ಮಾಡಿದಾಗ ಬಾಲ ಅಪರಾಧಿ ಎನ್ನುವ ಪದ ಬಳಸದೆ ತಪ್ಪು ಮಾಡಿದವನು ಎಂದು ಕರೆಯಬೇಕು. ಹಾಗೆಯೇ ಅತ್ಯಾಚಾರ ಎಂಬ ಪದ ಬಳಸದೆ ಲೈಂಗಿಕ ಹಲ್ಲೆ ಎಂಬುವ ಪದ ಬಳಸಬೇಕು ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಸೇಂಟ್ ಜೋಸೆಫ್ ಕಾನ್ವೆಂಟ್‌ನ ಮ್ಯಾನೇಜರ್ ಸಿಸ್ಟರ್ ವೀಣಾ ಅಧ್ಯಕ್ಷತೆ ವಹಿಸಿದ್ದರು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎಸ್.ರಶ್ಮಿ ಪ್ರಾಂಶುಪಾಲ ಜಯಶಂಕರ್, ಉಪನ್ಯಾಸಕಿ ಮಮತಾ, ಮಕ್ಕಳ ರಕ್ಷಣಾಧಿಕಾರಿ ರಾಜೇಂದ್ರ, ಕಾರ್ಯಕ್ರಮ ಸಂಯೋಜಕಿ ಸುಮಿತ್ರ ಭಾಗವಹಿಸಿದ್ದರು.

## 2028: ಕ್ಕು ಹೆಚ್ ಟಿ ಮಂಜು ಅವರೆ ಜೆಡಿಎಸ್ ಪಕ್ಷದ ಅಭ್ಯರ್ಥಿ: ನಿಖಿಲ್ ಕುಮಾರಸ್ವಾಮಿ





**ಕೆ.ಆರ್.ಪೇಟೆ:** ಮಂಡ್ಯ ಜಿಲ್ಲೆಯಲ್ಲಿ ಜೆಡಿಎಸ್ ಪಕ್ಷವು ಗಟ್ಟಿಯಾಗಿದೆ. ಸೈನಿಕರಂತಹ ನಮ್ಮ ಜೆಡಿಎಸ್ ಪಕ್ಷದ ಕಾರ್ಯಕರ್ತರು ಪಕ್ಷವನ್ನು ಸದೃಢವಾಗಿ ಕಟ್ಟಿ ಬೆಳೆಸಿದ್ದಾರೆ. ಆದರೆ ಸಚಿವ ಎನ್.ಚೆಲುವರಾಯಸ್ವಾಮಿ ಅವರು ನಮ್ಮ ಪಕ್ಷದಲ್ಲಿ ಶಾಸಕ, ಮಂತ್ರಿ ಸೇರಿದಂತೆ ಎಲ್ಲಾ ಅಧಿಕಾರ ಅನುಭವಿಸಿ ಹೋಗಿದ್ದು, ಈಗ ಜೆಡಿಎಸ್ ಮುಗಿಸುವ ಮಾತನಾಡುತ್ತಿದ್ದಾರೆ. ಇದು ಸಾಧ್ಯವಿಲ್ಲದ ಮಾತಾಗಿದೆ. 2028ಕ್ಕೆ ನಡೆಯುವ ವಿಧಾನಸಭಾ ಚುನಾವಣೆಯಲ್ಲಿ ನಾಗಮಂಗಲ ಕ್ಷೇತ್ರದಿಂದ ಭಾರೀ ಅಂತರದಿಂದ ಸೋಲುವ ಭಯವಿದೆ. ಅದಕ್ಕಾಗಿ ಬೇರೆ ಕ್ಷೇತ್ರವನ್ನು ಹುಡುಕುತ್ತಿದ್ದಾರೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಲೇವಡಿ ಮಾಡಿದರು.

ಅವರು ಕೆ.ಆರ್.ಪೇಟೆ ತಾಲ್ಲೂಕಿನ ಮಡುವಿನಕೋಡಿ ಗ್ರಾಮದಲ್ಲಿ ಕ್ಷೇತ್ರದ ಶಾಸಕ ಹೆಚ್.ಟಿ.ಮಂಜು ನೇತೃತ್ವದಲ್ಲಿ ನಡೆದ ಜೆಡಿಎಸ್ ಪಕ್ಷದ 25ನೇ ವರ್ಷದ ಬೆಳ್ಳಿಹಬ್ಬ ಮಹೋತ್ಸವ ಹಾಗೂ ವಿವಿಧ ಪಕ್ಷಗಳಿಂದ ನೂರಾರು ಮುಖಂಡರ ಜೆಡಿಎಸ್ ಪಕ್ಷ ಸೇರ್ಪಡೆ ಕಾರ್ಯಕ್ರಮ ಮತ್ತು ಜೆಡಿಎಸ್ ಪಕ್ಷದ ಬೃಹತ್ ಸಮಾವೇಶವನ್ನು ಉದ್ಘಾಟಿಸಿ ಕಾರ್ಯಕರ್ತರು ನೀಡಿದ ಆತ್ಮೀಯ ಅಭಿನಂದನೆಯನ್ನು ಸ್ವೀಕರಿಸಿ ಮಾತನಾಡಿದರು.

ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ಚೆಲುವರಾಯಸ್ವಾಮಿ ಅವರು ಮಂಡ್ಯ ಜಿಲ್ಲೆಯಿಂದ ಜೆಡಿಎಸ್ ಪಕ್ಷವನ್ನು ಹೊಡೆದೋಡಿಸಿ ಎಂದು ಅವರ ಯುವಕರಿಗೆ ಕರೆ ನೀಡಿರುವುದನ್ನು ನೋಡಿದರೆ ಅವರಿಗೆ ನಮ್ಮ ಪಕ್ಷದ ಮೇಲಿರುವ ಭಯವನ್ನು ತೋರಿಸುತ್ತದೆ. ರಾಜ್ಯ ಕಾಂಗ್ರೆಸ್ ನೇತೃತ್ವದ ಸರ್ಕಾರದ ದುರಾಡಳಿತದಿಂದ ರಾಜ್ಯದ ಜನತೆ ಬೇಸತ್ತಿದ್ದು 2028 ರಲ್ಲಿ ನಡೆಯುವ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಬಿಜೆಪಿ ನೇತೃತ್ವದ ಮೈತ್ರಿ ಸರ್ಕಾರ ಅಸ್ತಿತ್ವಕ್ಕೆ ಬರುವುದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಪಂಚ ಗ್ಯಾರಂಟಿಗಳನ್ನು ನಿಗದಿತ ಸಮಯಕ್ಕೆ ನೀಡದೆ ರಾಜ್ಯ ಸರ್ಕಾರವು ಅಳಿತಪ್ಪಿದೆ ಕಾಂಗ್ರೆಸ್ ಸರ್ಕಾರದ ದುರಾಡಳಿತದಿಂದ ರಾಜ್ಯದ ಜನತೆ ಬೇಸತ್ತಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ನಡುವಿನ ಅಧಿಕಾರದಾಸೆಯ ಹಗ್ಗ ಜಗ್ಗಾಟದಿಂದಾಗಿ ರಾಜ್ಯದಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳು ನೆನೆಗುದಿಗೆ ಬಿದ್ದಿವೆ ಎಂದು ಟೀಕಿಸಿದರು.

**2028ಕ್ಕೂ ಹೆಚ್.ಟಿ.ಮಂಜು ನಮ್ಮ ಪಕ್ಷದ ಅಭ್ಯರ್ಥಿ:** ಮಂಡ್ಯ ಜಿಲ್ಲೆಯು ಜೆಡಿಎಸ್ ಪಕ್ಷದ ಭದ್ರಕೋಟೆ ಎಂಬುದನ್ನು 2028ರ ಚುನಾವಣೆಯಲ್ಲಿ ಮತ್ತೊಮ್ಮೆ ಸಾಬೀತಾಗಲಿದೆ. ಕೆ.ಆರ್.ಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಶಾಸಕರಾದ ಹೆಚ್.ಟಿ.ಮಂಜು ಅವರನ್ನೇ ಮತ್ತೊಮ್ಮೆ ಅಭ್ಯರ್ಥಿ ಮಾಡಲಾಗುವುದು. ಮತ್ತೊಮ್ಮೆ ಗೆದ್ದು ಜೆಡಿಎಸ್–ಬಿಜೆಪಿ ಮೈತ್ರಿ ಸರ್ಕಾರದಲ್ಲಿ ಸಚಿವರಾಗಲಿ ಎಂದು ಆಶಯ ವ್ಯಕ್ತಪಡಿಸಿದರು. ಜೆಡಿಎಸ್ ರೈತರು ಹಾಗೂ ಬಡವರ ಪಕ್ಷವಾಗಿರುವುದರಿಂದ ಜಿಲ್ಲೆಯ ಜನತೆಯ ಮನಸ್ಸು ಹಾಗೂ ಮನೆಗಳಲ್ಲಿ ಶಾಶ್ವತವಾಗಿ ನೆಲೆಸಿದೆ. ಮಂಡ್ಯ ಲೋಕಸಭಾ ಸದಸ್ಯರಾಗಿ ಆಯ್ಕೆಯಾಗಿರುವ ಕುಮಾರಣ್ಣ ಅವರು ಕೇಂದ್ರದ ಸಚಿವರಾಗಿ ಇಡೀ ದೇಶವೇ ಮೆಚ್ಚುವಂತೆ ದಕ್ಷ ಪ್ರಾಮಾಣಿಕ ಆಡಳಿತ ನೀಡುತ್ತಿದ್ದಾರೆ ಎಂದು ನಿಖಿಲ್ ಕುಮಾರಸ್ವಾಮಿ ಹೇಳಿದರು.

ಶಾಸಕ ಎಚ್.ಟಿ.ಮಂಜು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ತಾಲ್ಲೂಕಿನ ಗಡಿಗ್ರಾಮ ಅಶೋಕನಗರದಿಂದ ಕೆ.ಆರ್.ಪೇಟೆ ಪಟ್ಟಣ ಮತ್ತು ಹರಿಹರಪುರದ ಮಾರ್ಗವಾಗಿ ಮಡುವಿನಕೋಡಿ ವರೆವಿಗೂ ಯುವ ಜೆಡಿಎಸ್ ವತಿಯಿಂದ ಬೃಹತ್ ಬುಲೆಟ್ ಬೈಕ್ ರ?ಯಾಲಿ ಮೂಲಕ ಬರಮಾಡಿಕೊಳ್ಳಲಾಯಿತು.

ಇದೇ ವೇಳೆ ನಿಖಿಲ್ ಕುಮಾರಸ್ವಾಮಿ ಅವರ 38ನೇ ವರ್ಷದ ಹುಟ್ಟು ಹಬ್ಬದ ಅಂಗವಾಗಿ 38ಕೆ.ಜಿ ಬೃಹತ್ ಗಾತ್ರದ ಕೇಕ್ ಕಟ್ ಮಾಡಿ ಹುಟ್ಟು ಹಬ್ಬ ಆಚರಣೆ ಮಾಡಲಾಯಿತು. ಕಾರ್ಯಕ್ರಮಕ್ಕೂ ಮುನ್ನ ನಿಖಿಲ್ ಕುಮಾರಸ್ವಾಮಿ ಮತ್ತು ಹೆಚ್.ಟಿ.ಮಂಜಣ್ಣ ಅವರಿಗೆನಿಖಿಲ್ ಕುಮಾರಸ್ವಾಮಿ ಅವರನ್ನು ಬೃಹತ್ ಗಾತ್ರದ ಕೊಬ್ಬರಿ ಕಾಯಿ ಮತ್ತು ಮಂಡ್ಯ ಬೆಲ್ಲದ ಹಾರವನ್ನು ಹಾಕಿ ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಡಿ.ರಮೇಶ್, ರಾಜ್ಯ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಕೃಷ್ಣಾರೆಡ್ಡಿ, ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ, ರಾಜ್ಯ ಜೆಡಿಎಸ್ ವಕ್ತಾರ ಅಶ್ವಿನ್ ಕುಮಾರ್, ರಾಜ್ಯ ಸಹಕಾರ ಮಹಾಮಂಡಲದ ರಾಜ್ಯ ನಿರ್ದೇಶಕರಾದ ಚೋಳೇನಹಳ್ಳಿ ಪುಟ್ಟಸ್ವಾಮೀಗೌಡ, ಎಸ್.ಎಲ್.ಮೋಹನ್, ಜೆಡಿಎಸ್ ಚಿಕ್ಕಮಗಳೂರು ಮತ್ತು ಬಳ್ಳಾರಿ ಜಿಲ್ಲಾ ಉಸ್ತುವಾರಿ ರಾಜೇನಹಳ್ಳಿ ಕುಮಾರಸ್ವಾಮಿ, ತಾಲ್ಲೂಕು ಪಿ.ಎಲ್.ಡಿ.ಬ್ಯಾಂಕ್ ಮಾಜಿ ಅಧ್ಯಕ್ಷ ಎ.ಆರ್.ರಘು, ತಾಲ್ಲೂಕು ಜೆಡಿಎಸ್ ಕಾರ್ಯಾಧ್ಯಕ್ಷ ಬಲ್ಲೇನಹಳ್ಳಿ ರಾಮಚಂದ್ರನ್, ತಾಲ್ಲೂಕು ಯುವ ಜೆಡಿಎಸ್ ಅಧ್ಯಕ್ಷ ವಡ್ಡರಹಳ್ಳಿ ಮಹಾದೇವೇಗೌಡ, ರಾಜ್ಯ ಯುವ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಕೆ.ಬಿ.ನಾಗೇಶ್, ಎಸ್.ಆರ್.ದಿನೇಶ್, ಮದ್ದಿಕ್ಯಾಚಮನಹಳ್ಳಿ ಸಂದೇಶ್, ತಾಲ್ಲೂಕು ಜೆಡಿಎಸ್ ಕಾನೂನು ಘಟಕದ ಅಧ್ಯಕ್ಷ ವಿ.ಎಸ್.ಧನಂಜಯಕುಮಾರ್, ಜಿಲ್ಲಾ ದಿಶಾ ಕಮಿಟಿ ಸದಸ್ಯ ನರಸನಾಯಕ್, ಟಿಎಪಿಸಿಎಂಎಸ್ ಅಧ್ಯಕ್ಷ ಬಲದೇವ್, ನಿರ್ದೇಶಕರಾದ ಮಲ್ಲೇನಹಳ್ಳಿ ಮೋಹನ್, ಹೆಚ್.ಟಿ.ಲೋಕೇಶ್, ಬೊಮ್ಮೇನಹಳ್ಳಿ ಮಂಜುನಾಥ್, ಕೊರಟೀಕೆರೆ ದಿನೇಶ್, ತಾಲ್ಲೂಕು ಜೆಡಿಎಸ್ ಮಹಿಳಾ ವಿಭಾಗದ ಅಧ್ಯಕ್ಷೆ ರೇಖಾ ಲೋಕೇಶ್,ಕಾರ್ಯದ್ಯಕ್ಷೆ ರತಿಮಹಾದೇವ್, ಗಾಯತ್ರಿ ರೇವಣ್ಣ, ಜಯಲಕ್ಷ್ಮಮ್ಮ,ಮುಖಂಡರಾದ ತಾ.ಪಂ. ಮಾಜಿ ಅಧ್ಯಕ್ಷ ಮೆಣಸ ಮಹಾದೇವೇಗೌಡ, ಜಿ.ಪಂ.ಮಾಜಿ ಉಪಾಧ್ಯಕ್ಷೆ ಗಾಯಿತ್ರಿ ರೇವಣ್ಣ, ತಾ.ಪಂ.ಮಾಜಿ ಸದಸ್ಯ ಚಿಕ್ಕಗಾಡಿಗನಹಳ್ಳಿ ಸೋಮಶೇಖರ್, ಕೆ.ಟಿ.ಚಂದ್ರೇಗೌಡ, ಗಂಜಿಗೆರೆಕೊಪ್ಪಲು ರಾಮಕೃಷ್ಣೇಗೌಡ, ಅತೀಕ್ ಅಹಮದ್, ಮದ್ದಿಕ್ಯಾಚಮನಹಳ್ಳಿ ಸಂದೇಶ್, ಚಿಕ್ಕೋಸಹಳ್ಳಿ ನಾಗೇಶ್, ಅಗ್ರಹಾರಬಾಚಹಳ್ಳಿ ಲೋಕೇಶ್ ಸೇರಿದಂತೆ ಸಾವಿರಾರು ಕಾರ್ಯಕರ್ತರು ಸಮಾರಂಭದಲ್ಲಿ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಉದ್ಯಮಿ ಮಡುವಿನಕೋಡಿ ಎಂ.ಆರ್.ಮನು ಸೇರಿದಂತೆ ನೂರಾರು ವಿವಿಧ ಪಕ್ಷಗಳ ಮುಖಂಡರು ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಯಾದರು.

## ಜಿಲ್ಲಾಧಿಕಾರಿಗಳಿಂದ ಮಂಡ್ಯದ ಪದ್ಮ ಭೂಷಣ ಪ್ರಶಸ್ತಿ ವಿಜೇತ ಅಂಕೇಗೌಡರಿಗೆ ಸನ್ಮಾನ

**ಮಂಡ್ಯ:** ಜಿಲ್ಲಾಧಿಕಾರಿ ಡಾ.ಕುಮಾರ ಅವರು ಪಾಂಡವಪುರ ತಾಲೂಕಿನ ಹರಳಹಳ್ಳಿಯ ಪದ್ಮ ಭೂಷಣ ಪ್ರಶಸ್ತಿ ವಿಜೇತ ಅಂಕೇಗೌಡ ಅವರು ನಿರ್ಮಿಸಿರುವ "ಪುಸ್ತಕ ಮನೆ" ಗೆ ಭೇಟಿ ನೀಡಿದರು.

ಪುಸ್ತಕ ಮನೆಯಲ್ಲಿ ಸಂಗ್ರಹಿಸಲಾಗಿರುವ ಸುಮಾರು ನಾಲ್ಕು ಲಕ್ಷಕ್ಕೂ ಹೆಚ್ಚು ಪುಸ್ತಕಗಳು, ನಾಣ್ಯಗಳು, ಅಂಚೆ ಚೀಟಿಗಳು ಮತ್ತು ಅಪರೂಪದ ಲಗ್ನ ಪತ್ರಿಕೆಗಳನ್ನು ವೀಕ್ಷಿಸಿದರು.

ಜಿಲ್ಲಾಧಿಕಾರಿಗಳು ಪದ್ಮ ಭೂಷಣ ಪ್ರಶಸ್ತಿ ವಿಜೇತ ಅಂಕೇಗೌಡರೊಂದಿಗೆ ಆಪ್ತ ಸಮಾಲೋಚನೆ ನಡೆಸಿ ನಂತರ ಅವರಿಗೆ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಪಾಂಡವಪುರ ಉಪ ತಹಶೀಲ್ದಾರ್ ಸಂತೋಷ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



## ಮಕ್ಕಳ ರಕ್ಷಣೆ ನಮ್ಮೆಲ್ಲರ ಹೊಣೆ: ರೇಣುಕಾ ವೆಂಕಟೇಶ ನಾಯಕ



**ಕೆ. ಆರ್. ನಗರ :** ಮಕ್ಕಳ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯಾಗಿದ್ದು ಸರ್ಕಾರದ ನಿಯಮವನ್ನು ಪಾಲಿಸುವ ಮೂಲಕ ಅವರ ಭವಿಷ್ಯ ರೂಪಿಸೋಣ ಎಂದು ತಂದ್ರೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ರೇಣುಕಾ ವೆಂಕಟೇಶ ನಾಯಕ ತಿಳಿಸಿದರು. ಗ್ರಾಮ ಪಂಚಾಯಿತಿಯಲ್ಲಿ ಆಯೋಜಿಸಿದ ಹಣ ಗ್ರಾಮ ಸಭೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪಿಡಿಒ ವಿ ಎನ್ ಪೂರ್ಣಿಮಾ ಮಾತನಾಡಿ ತಂದ್ರೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರುವ ಎಲ್ಲಾ ಸರ್ಕಾರಿ ಶಾಲೆ ಮತ್ತು ಅಂಗನವಾಡಿ ಮಕ್ಕಳ ಮತ್ತು ಪೋಷಕರಿಗೆ ಕಾನೂನು ಅರಿವು ಮೂಡಿಸಲು ಗ್ರಾಮ ಸಭೆ ಮಾಡಲಾಗುತ್ತಿದ್ದು ಇದರ ಸದುಪಯೋಗವನ್ನು ಪಡೆದುಕೊಳ್ಳಿ ಎಂದರು.

ಪ್ರತಿ ಅಂಗನವಾಡಿ ಮತ್ತು ಶಾಲೆಯಲ್ಲೂ ತರಗತಿಗೆ ಸಂಬಂಧಪಟ್ಟಂತೆ ಪ್ರಬಂಧ ಸ್ಪರ್ಧೆ ಗ್ರಾಮ ಪಂಚಾಯಿತಿ ಆಡಳಿತಕ್ಕೆ ಸಂಬಂಧಪಟ್ಟಂತೆ ಬರವಣಿಗೆ. ಶಾಲಾ ಮಂತ್ರಿ ಮಂಡಲದ ಬಗ್ಗೆ ಮತ್ತು ಅಂಗನವಾಡಿ ಮಕ್ಕಳಿಗೆ ಆಟೋ ಊಟದ ಸ್ಪರ್ಧೆ ಸೇರಿದಂತೆ ಶೈಕ್ಷಣಿಕವಾಗಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿದರು. ಇದರಲ್ಲಿ ಆಯ್ಕೆಯಾದ ಎಲ್ಲ ಮಕ್ಕಳಿಗೂ ಬಹುಮಾನ ವಿತರಣೆ ಮಾಡಲಾಯಿತು.

ಸರ್ಕಾರದಿಂದ ಗ್ರಾಮ ಪಂಚಾಯಿತಿಗೆ ಬರುವ ಅನುದಾನ ಮತ್ತು ಯೋಜನೆಗಳ ಬಗ್ಗೆ ಜನರಿಗೆ ತಿಳಿಸಲಾಯಿತು. ಮಹಿಳೆಯರು ಮತ್ತು ನಿರುದ್ಯೋಗಿಗಳು ಗ್ರಾಮ ಪಂಚಾಯಿತಿಯಿಂದ ಪಡೆಯಬೇಕಾದ ಸೌಲಭ್ಯ ಮತ್ತು ಸ್ವಾವಲಂಬಿ ಜೀವನ ಹಾಗೂ ಉದ್ಯೋಗಕ್ಕೆ ಸಿಗುವ ಸೌಲಭ್ಯಗಳು ಸೇರಿದಂತೆ ವಿವಿಧ ರೀತಿಯ ಮಾಹಿತಿಯನ್ನು ತಿಳಿಸಿದರು.

ಗ್ರಾಮ ಸಭೆಯಲ್ಲಿ ಅನುಮೋದನೆ ಪಡೆದು ವ್ಯಾಪ್ತಿಯಲ್ಲಿರುವ ಅಂಗನವಾಡಿಗಳ ಕಿಟಕಿ ಬಾಗಿಲು ಮತ್ತು ಇನ್ನಿತರ ಸಮಸ್ಯೆಗಳನ್ನು ಪರಿಹರಿಸಲು ಅನುದಾನ ಬಳಸುವುದರ ಬಗ್ಗೆ ಗ್ರಾಮ ಪಂಚಾಯಿತಿ ಸದಸ್ಯರಿಂದ ಮತ್ತು ಸಾರ್ವಜನಿಕರಿಂದ ಒಪ್ಪಿಗೆ ಪಡೆದುಕೊಳ್ಳಲಾಗಿತ್ತು. ಜೊತೆಗೆ ಗ್ರಾಮ ಪಂಚಾಯಿತಿಯಲ್ಲಿ ಇರುವ ಶೌಚಾಲಯದ ಸಮಸ್ಯೆಯನ್ನು ಶೀಘ್ರದಲ್ಲೇ ಬಗೆಹರಿಸುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಸದಸ್ಯರಾದ ಅನಿತಾಕೀರ್ತಿ, ಸುನಿತಾಸ್ವಾಮಿ, ಸಣ್ಣಸ್ವಾಮಿ, ಪಾಪೇಗೌಡ, ಬಿಲ್ ಕಲೆಕ್ಟರ್ ಸಂದರೇಗೌಡ, ರಾಘವೇಂದ್ರ, ರಾಕಿ, ಸೇರಿದಂತೆ ಪಂಚಾಯಿತಿ ಎಲ್ಲಾ ಸಿಬ್ಬಂದಿಗಳು ಇದ್ದರು.

## ಯುವಕರು ರಕ್ತದಾನ ಮಾಡಿ ಜೀವ ಉಳಿಸಿ: ಶ್ರೀಕಂಠ

**ನಂಜನಗೂಡು:** ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವ ಸೇನೆ ಅಧ್ಯಕ್ಷ ಶ್ರೀಕಂಠ ಆರ್ ನೇತೃತ್ವದಲ್ಲಿ ಸುಮಾರು 50ಕ್ಕೂ ಹೆಚ್ಚು ಯುವ ಮುಖಂಡರು ರಕ್ತದಾನ ಮಾಡುವ ಮೂಲಕ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನಿಗೆ ನಮನ ಸಲ್ಲಿಸಿದರು.

ಸಂಗೊಳ್ಳಿ ರಾಯಣ್ಣ ಬಲಿದಾನದಂದು ಜೀವದಾರ ಸಹಯೋಗದೊಂದಿಗೆ ನಗರಸಭೆ ಮಾಜಿ ಅಧ್ಯಕ್ಷ ಮಹದೇವಸ್ವಾಮಿ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವ ಸೇನೆ ಅಧ್ಯಕ್ಷ ಶ್ರೀಕಂಠ ಸ್ವಾಮಿ ಹಾಗೂ ರೈತ ಸಂಘದ ತಾಲೂಕು ಅಧ್ಯಕ್ಷ ಸತೀಶ್ ರಾವ್ ಕನಕ ಜಯಂತೋತ್ಸವ ಮಾಜಿ ಅಧ್ಯಕ್ಷ ಮೋಹನ್ ಸೇರಿದಂತೆ 50ಕ್ಕೂ ಹೆಚ್ಚು ಯುವಕರು ರಕ್ತದಾನ ಮಾಡಿದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ದೀಪ ಬೆಳಗುವ ಮೂಲಕ ನಗರಸಭೆ ಮಾಜಿ ಅಧ್ಯಕ್ಷ ಮಾದೇವಸ್ವಾಮಿ ಚಾಲನೆ ನೀಡಿದರು ನಂತರ ರಕ್ತದಾನ ಶಿಬಿರ ನಡೆಯಿತು ಇದೇ ಸಂದರ್ಭದಲ್ಲಿ ಶಾಸಕ ದರ್ಶನ್ ದ್ರುವ ನಾರಾಯಣ್ ಮತ್ತು ಮಾಜಿ ಶಾಸಕ ಹರ್ಷವರ್ಧನ್ ಈ ಕಾರ್ಯಕ್ರಮದಲ್ಲಿ ಭಾಗಿಯಾಗಿ ಪುಷ್ಪಾರ್ಚನೆ ಸಲ್ಲಿಸಿದರು.

24 ವರ್ಷ ಗಡಿಭಾಗದಲ್ಲಿ ಇಂಡಿಯನ್ ಆರ್ಮಿ ಆಗಿ ಸೇವೆ ಸಲ್ಲಿಸಿದ ಸೇಕ್ ದಾವೂದ್ ಎಂಬುವರಿಗೆ ಸನ್ಮಾನಿಸಲಾಯಿತು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವ ಸೇನೆ ಅಧ್ಯಕ್ಷ ಶ್ರೀಕಂಠ ಮಾತನಾಡಿ ಈ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲು ಬಂದಂತ ಎಲ್ಲರಿಗೂ ಅಭಿನಂದನೆಗಳು. ನಾವು ಮಾಡುವ ಯಾವುದೇ ಕಾರ್ಯಕ್ರಮ ಅರ್ಥಪೂರ್ಣವಾಗಿರಬೇಕು ಇನ್ನೊಬ್ಬರಿಗೆ ಸಹಾಯ ಹಸ್ತ ನೀಡುವ ಮೂಲಕ ಕಾರ್ಯಕ್ರಮ ಆಗಬೇಕು ಪಟಾಕಿ ಸಿಡಿಸಿ ಆಚರಣೆ ಸಲ್ಲದು ಆದ್ದರಿಂದ ನಮ್ಮೆಲ್ಲ ಯುವಕರ ಮಿತ್ರರ ಸಹಾಯದಿಂದ ರಕ್ತದಾನ ಮಾಡಲು ಸಭೆಯಲ್ಲಿ ನಿರ್ಧರಿಸಿದೆವು . ಅದರಂತೆ ಎಲ್ಲರೂ ಕೂಡ ರಕ್ತದಾನ ಮಾಡಿ ಕಾರ್ಯಕ್ರಮ ಯಶಸ್ವಿ ಮಾಡಿದ್ದಾರೆ ಅವರಿಗೆ ಅಭಿನಂದನೆಗಳು ಕಡೆಯದಾಗಿ ಹೇಳುವುದೇನೆಂದರೆ ರಕ್ತದಾನ ಮಾಡಿ ಜೀವ ಉಳಿಸಿ ಎಂದು ಅಥವಾ ಜೀವ ಉಳಿಸಿ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ನಗರಸಭೆ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ರೈತ ಮುಖಂಡರಾದ ವಿದ್ಯಾಸಾಗರ್, ಸತೀಶ್ ರಾವ್ ಇಮ್ಮಾವು ರಘು ಖಾಲಿದ್ ಚಂದ್ರು ಸಿದ್ದರಾಜು ಮನೋಜ್ ಕುಮಾರ್ ವಿನಯ್ ದೇವು ಮದನ ರವಿಕುಮಾರ್ ಶಿವಸ್ವಾಮಿ ಜೈಚಂದ್ರ ಶಿವಪ್ಪ ಮಾದಪ್ಪ ಯೋಗಿ ಮಧುರಾಜ್ ಮನು ಮಹೇಶ್ ಲೋಕೇಶ್ ಮೋಹನ್ ಪ್ರಭು ನಿಂಗರಾಜು ಮಾದೇವ ಮಹೇಶ್ ಸುರೇಶ್ ನಂದ ಮಂಜು ಶಿವಕುಮಾರ ಪ್ರದೀಪ್ ವಾಸು ಬಸವರಾಜು ಮತ್ತು ರಾಯಣ್ಣನ ಅಭಿಮಾನಿ ಬಳಗದವರು ಮತ್ತು ಅಭಿಮಾನಿಗಳು ಸೇರಿದಂತೆ ಇತರರು ಇದ್ದರು.



## ಫೆ.2ರಂದು ಅಭಿನಂದನಾ ಗ್ರಂಥ ಬಿಡುಗಡೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ



**ಮಂಡ್ಯ:** ಎಂ.ಶ್ರೀನಿವಾಸ್ ಹುಟ್ಟುಹಬ್ಬದ ಹಿನ್ನಲೆ ಹನಕೆರೆ ಎಂ.ಶ್ರೀನಿವಾಸ್ ಪ್ರತಿಷ್ಠಾನ ವತಿಯಿಂದ ಕರ್ನಾಟಕ ಸಂಘದ ಸಹಕಾರದೊಂದಿಗೆ ಅಭಿನಂದನಾ ಗ್ರಂಥ ಬಿಡುಗಡೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಫೆ.2ರಂದು ಸಂಜೆ 4 ಗಂಟೆಗೆ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಡಿ.ಶಿವರಾಜು ಕೀಲಾರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಂ.ಶ್ರೀನಿವಾಸ್ ಅವರ ಹುಟ್ಟುಹಬ್ಬದ ಅಂಗವಾಗಿ 'ಶ್ರೀನಿಧಿ' ಎಂ.ಶ್ರೀನಿವಾಸ್ ಅಭಿನಂದನಾ ಗ್ರಂಥ, ಪ್ರಗತಿಪರ ರೈತ ಶಿವು ಬನ್ನಹಳ್ಳಿ ಅವರಿಗೆ ಅರಸಮ್ಮ ಮೆಣಸೇಗೌಡ ಕೃಷಿ ಪ್ರಶಸ್ತಿ ಹಾಗೂ ಸಾಹಿತಿ ಡಾ.ಎಸ್.ತುಕಾರಾಮ್ ಅವರಿಗೆ ಎಂ.ಶ್ರೀನಿವಾಸ್ ಸಮಾಜ ಸೇವಾ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು.

ಕೃಷಿ ಮತ್ತು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಪಿ.ರವಿಕುಮಾರ್‌ಗೌಡ ಅಧ್ಯಕ್ಷತೆ ವಹಿಸುವರು. ವಿಶ್ವ ಒಕ್ಕಲಿಗ ಮಠದ ಪೀಠಾಧ್ಯಕ್ಷ ಡಾ.ನಿಶ್ಚಲಾನಂದನಾಥ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದು, ಡಾ.ಎಸ್.ಶಿವರಾಮು, ಲೋಕೇಶ್ ಚಂದಗಾಲು ಸಂಪಾದಕತ್ವದ 'ಶ್ರೀನಿಧಿ' ಅಭಿನಂದನಾ ಗ್ರಂಥವನ್ನು ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ ಆದಾಯ ತೆರಿಗೆ ಇಲಾಖೆಯ ಮುಖ್ಯ ಆಯುಕ್ತ ಜಯರಾಂ ರಾಯಪುರ ಬಿಡುಗಡೆ ಮಾಡುವರು ಎಂದು ಹೇಳಿದರು.

ಮಾಜಿ ಶಾಸಕ ಎಂ.ಶ್ರೀನಿವಾಸ್ ಅವರನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಭಿನಂದಿಸಲಿದ್ದಾರೆ. ಶಾಸಕರು ಹಾಗೂ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷ ಪಿ.ಎಂ.ನರೇಂದ್ರಸ್ವಾಮಿ ಹಾಗೂ ಒಕ್ಕಲಿಗರ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಎಸ್.ಆತ್ಮಾನಂದ ಪ್ರಶಸ್ತಿ ಪ್ರದಾನ ಮಾಡುವರು.

ಮುಖ್ಯ ಅತಿಥಿಗಳಾಗಿ ಶಾಸಕ ಹಾಗೂ ಸೆಸ್ಕ್ ಅಧ್ಯಕ್ಷ ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಶಾಸಕರಾದ ಕೆ.ಎಂ.ಉದಯ್, ದರ್ಶನ್ ಪುಟ್ಟಣ್ಣಯ್ಯ, ಮಧು ಜಿ.ಮಾದೇಗೌಡ, ಮಾಜಿ ಸಚಿವ ಕೆ.ಸಿ.ನಾರಾಯಣಗೌಡ, ವಿಧಾನಪರಿಷತ್ ಮಾಜಿ ಸದಸ್ಯರಾದ ಬಿ.ರಾಮಕೃಷ್ಣ, ಮರಿತಿಬ್ಬೇಗೌಡ, ಕೆ.ಟಿ.ಶ್ರೀಕಂಠೇಗೌಡ ಉಪಸ್ಥಿತರಿರುವರು. ನಿವೃತ್ತ ಪ್ರಾಂಶುಪಾಲರಾದ ಡಾ.ಮ.ರಾಮಕೃಷ್ಣ ಪ್ರಶಸ್ತಿ ಪುರಸ್ಕೃತರ ಕುರಿತು, ಡಾ.ಎಸ್.ಬಿ.ಶಂಕರಗೌಡ ಎಂ.ಶ್ರೀನಿವಾಸ್ 75– ನುಡಿ ಹಾರೈಕೆ ಅರ್ಪಿಸಲಿದ್ದಾರೆ. ಪ್ರಶಸ್ತಿ ಪುರಸ್ಕೃತರಿಗೆ ತಲಾ 25 ಸಾವಿರ ರೂ ನಗದು ನೀಡಲಾಗುವುದು ಎಂದು ವಿವರಿಸಿದರು. ಗೋಷ್ಠಿಯಲ್ಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ.ಜಯಪ್ರಕಾಶ್‌ಗೌಡ, ಪ್ರತಿಷ್ಠಾನದ ಕಾರ್ಯದರ್ಶಿ ಹಾಗೂ ಕರ್ನಾಟಕ ಸಂಘದ ನಿರ್ದೇಶಕ ಎಚ್.ಎನ್.ನಾಗಪ್ಪ, ಟ್ರಸ್ಟಿಗಳಾದ ಮಂಜುಳ ಉದಯಶಂಕರ್, ಸಿ.ಎಚ್.ಶಿವರುದ್ರಪ್ಪ, ಕೋಶಾಧ್ಯಕ್ಷ ಎಚ್.ಎನ್.ರಾಮಚಂದ್ರ, ಉಪಾಧ್ಯಕ್ಷ ತಗ್ಗಹಳ್ಳಿ ವೆಂಕಟೇಶ್, ಕರ್ನಾಟಕ ಸಂಘದ ಕಾರ್ಯದರ್ಶಿ ಲೋಕೇಶ್ ಚಂದಗಾಲು, ಮಾರ್ಗದರ್ಶಕ ಡಾ.ಎಸ್.ಬಿ.ಶಂಕರಗೌಡ ಇದ್ದರು.


## ಡಿಜಿಪಿ ರಾಮಚಂದ್ರರಾವ್ ಏಕಾಏಕಿ ಅಮಾನತು ಖಂಡನೀಯ

**ಮಂಡ್ಯ:** ಯಾವುದೇ ಪ್ರಾಥಮಿಕ ವಿಚಾರಣೆ ನಡೆಸದೇ ಡಿಜಿಪಿ ರಾಮಚಂದ್ರರಾವ್ ಏಕಾಏಕಿ ಅಮಾನತು ಮಾಡಿರುವುದು ರಾಜ್ಯ ಸರಕಾರ ದಲಿತ ವಿರೋಧಿ ನಡೆಯಾಗಿದೆ ಎಂದು ಛಲವಾದಿ ಮಹಾಸಭಾದ ಮಳವಳ್ಳಿ ತಾಲೂಕು ಅಧ್ಯಕ್ಷ ಎಂ.ಬಿ.ಮಹೇಶ್ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಮಚಂದ್ರರಾವ್ ಪೊಲೀಸ್ ಇಲಾಖೆಯ ಉತ್ತನ ಅಧಿಕಾರಿಯಾಗಿದ್ದಾರೆ. ಅವರ ವಿರುದ್ಧದ ಆರೋಪಕ್ಕೆ ಪ್ರಾಥಮಿಕ ತನಿಖೆ ನಡೆಸದೇ ಅಥವಾ ಯಾವುದೇ ವರದಿಗೆ ಕಾಯದೇ ಅಮಾನತು ಮಾಡಿರುವ ಕ್ರಮ ಸರಿಯಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕೆಲವು ವಿಡಿಯೋ ಹಾಗೂ ಆಡಿಯೋಗಳನ್ನ ಆಧಾರದ ಮೇಲೆ ರಾಮಚಂದ್ರರಾವ್ ಅಮಾನತು ಮಾಡಲಾಗಿದೆ. ಆದರೆ ರಾಮಚಂದ್ರರಾವ್ ಅವರು ಇದರಲ್ಲಿ ಕೃತಕ ಬುದ್ಧಿಮತೆ(ಎಐ) ತಂತ್ರಜ್ಞಾನ ಬಳಸಿ ಮಾಡಲಾಗಿದೆ ಎಂಬ ಅನುಮಾನ ವ್ಯಕ್ತಪಡಿಸಿದ್ದಾರೆ. ಹೀಗಿರುವಾಗಿ ಅವರನ್ನು ಅಮಾನತು ಮಾಡದೇ ತನಿಖೆ ನಡೆಸಿ ಕ್ರಮ ಕೈಗೊಳ್ಳಬಹುದಿತ್ತು ಎಂದು ಅಭಿಪ್ರಾಯ ಪಟ್ಟರು.

ಈ ಸಂಬಂಧ ರಾಜ್ಯದ ದಲಿತರಿಗೆ ರಕ್ಷಣೆ ನೀಡುವಂತೆ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಗುವುದು. ರಾಜ್ಯಪಾಲರು ನಿರ್ಲಕ್ಷ್ಯ ತೋರಿದರೆ ದಲಿತಪರ ಸಂಘಟನೆಗಳು, ಛಲವಾದಿ ಮಹಾಸಭಾ, ಕರ್ನಾಟಕ ಬಂಜಾರ ಬ್ರಿಗೇಡ್ ಹಾಗೂ ಕನ್ನಡಪರ ಹೋರಾಟಗಾರರು ರಾಜ್ಯಾದ್ಯಂತ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಸಿದರು.



# ರಾಜ್ಯ ರಾಜಕರಣ ಅಯೋಮಯ ಸ್ಥಿತಿಯಲ್ಲಿದೆ: ಸಿ.ಟಿ.ರವಿ



**ಮಂಡ್ಯ:** ಕಾಂಗ್ರೆಸ್‌ನ ರಾಜ್ಯ ರಾಜಕರಣ ಅಯೋಮಯ ಸ್ಥಿತಿಯಲ್ಲಿದೆ ಎಂದು ಮಾಜಿ ಸಚಿವ ಸಿ.ಟಿ.ರವಿ ಹೇಳಿದರು.

ಮೈಸೂರುನಿಂದ ಬೆಂಗಳೂರಿಗೆ ಹೆದ್ದಾರಿ ಮಾರ್ಗವಾಗಿ ತೆರಳುತ್ತಿದ್ದಾದ ನಗರದ ಸ್ವರ್ಣಸಂದ್ರ ಬಡಾವಣೆಯಲ್ಲಿ ಜಿಲ್ಲಾ ಬಿಜೆಪಿ ಮುಖಂಡ ಎಚ್.ಆರ್.ಅರವಿಂದ್ ಮತ್ತು ಜಿಲ್ಲಾ ಬಿಜೆಪಿ ಪದಾಧಿಕಾರಿಗಳಿಂದ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು.

ದಿನಾ ಒಳ್ಳೆಯ ಕಾರಣಕ್ಕೆ ಈ ಸರ್ಕಾರ ಸುದ್ದಿಯಾಗುತ್ತಿಲ್ಲ, ದಿನಾ ಕೆಟ್ಟರಾಜಕರಣಕ್ಕೆ ಪ್ರಚಾರವಾಗುತ್ತಿದೆ, ಅತ್ಯಾಚಾರ, ಡ್ರಗ್ಸ್, ದರೋಡೆ ಇವು ಒಳ್ಳೆಯ ಕಾರಣವೇನು?, ರೈತರ ಆತ್ಮಹತ್ಯೆ, ಪ್ರಾಮಾಣಿಕ ಅಧಿಕಾರಿಗಳಿಗೆ ಕಿರುಕುಳ ಈ ರೀತಿ ಕೆಟ್ಟಕಾರಣಕ್ಕೇನೇ ಸುದ್ದಿಯಾಗುತ್ತಿದೆ ಎಂದು ಕಿಡಿಕಾರಿದರು.

ದಿನ ಬೆಳಿಗಾರೆ ಭ್ರಷ್ಟಾಚಾರದ ಹಗರಣಗಳು, ಈ ಸರ್ಕಾರದ ಎಲ್ಲಾ ಮಂತ್ರಿಗಳಿಗೂ ಒಂದೊಂದಲ್ಲ ಒಂದು ಭ್ರಷ್ಟಾಚಾರದ ಹಗರಣಗಳು ಸುತ್ತಿಕೊಂಡಿರುವುದು ನೋಡಿದ್ದೇವೆ, ಈ ಸರ್ಕಾರದ ವಿಶೇಷತೆಯಾಗಿದೆ, ಇದನ್ನ ವಿಷಯಾಂಂತರ ಮಾಡಲಿಕ್ಕೆ ಜನರಿಗೆ ಅನುಕೂಲವಾಗುತ್ತಿದ್ದರೂ ರಾಜಕರಣ ಮಾಡುತ್ತಾರೆ ಎಂದು ಎಚ್ಚರಿಸಿದರು.

ವಿಬಿ ಜಿ ರಾಮ್ ಜಿ ಯೋಜನೆಯಲ್ಲಿ ಹಳ್ಳಿಗಳ ಸಮಗ್ರ ಅಭಿವೃದ್ಧಿ ಪಡಿಸಲಿಕ್ಕೆ ಪರಿಕಲ್ಪನೆ ಇದೆ, ಕೌಶಲ್ಯದ ಮೂಲಕ ಸ್ವಾವಲಂಬಿನೆ ರೂಪಿಸಬೇಕು ಎನ್ನುವ ಉದ್ದೇಶಹೊಂದಿದೆ, 15ದಿನದೊಳಗೆ ಕೂಲಿಕಾರರಿಗೆ ಹಣಪಾವತಿಯಾಗಬೇಕು, ತಪ್ಪಿದರೆ ಬಡ್ಡಿಕೊಡುವವ್ಯವಸ್ಥೆ ಇದೆ, ಹಿಂದೆ ಎಲ್ಲಿತ್ತು ಎಂದು ಹೇಳಿದರು.

ಈಗ 2ವರ್ಷದಿಂದ ಕೆಲಸ ಮಾಡಿದೊರಿಗೆ ರಾಜ್ಯ ಸರ್ಕಾರ ಹಣಪಾವತಿ ಮಾಡಿಲ್ಲ, ಅದನ್ನ ಕೊಡಲಿಕ್ಕೆ ಶೇ.10 ಕಮಿಷನ್ ಇಸ್ಕೊತಿದ್ದಾರೆ, ಶೇ.10ರಿಂದ 12ರಷ್ಟು ಕಮಿಷನ್ ಕೊಟ್ಟರೆ ಎನ್‌ಓಸಿ ಕೊಡ್ತಾರೆ, ಆದರೆ ಕೇಂದ್ರಸರ್ಕಾರ ನೇರವಾಗಿ ಶ್ರಮಜೀವಿಯ ಖಾತೆಗೆ ಹಣಪಾವತಿಯಾಗುತ್ತದೆ, ತಡವಾದರೆ ಬಡ್ಡಿಸೇರಿಸಿ ಕೊಡುತ್ತಾರೆ, ಅದನ್ನ ಕಾಂಗ್ರೆಸ್ ವಿರೋದ ಮಾಡ್ತಾವರೆ ಎಂದು ತಿಳಿಸಿದರು.

ಕಾಂಗ್ರೆಸಿಗರು ಗಾಂಧಿ ಹೆಸರೇಳುತ್ತಾರೆ, ಗಾಂಧಿ ಹೆಸರಲಿದ್ದಾರೋ ತತ್ವದಲ್ಲಿದ್ದಾರೋ ನನ್ನ ದೃಷ್ಟಿಯಲ್ಲಿ ಗಾಂಧಿ ಅನ್ನೋ ಹೆಸರಿಗೆ ಮೌಲ್ಯಬಂದಿದ್ದು ಆ ತತ್ವಕಾರಣಕ್ಕೆ ಆ ತತ್ವ ಕೊಂದಿದ್ದ್ಯಾರು, ಗಾಂಧಿ ದೇಹಕ್ಕೆ ಗುಂಡೊಡೆದಿದ್ದು ಗೂಡ್ಸೆ, ಗಾಂಧಿ ತತ್ವಕ್ಕೆ ಗುಂಡೊಡೆದಿದ್ದು ಕಾಂಗ್ರೆಸ್, ಗಾಂಧಿ ತತ್ವ ಮದ್ಯಪಾನ ನಿಷೇಧ ಆಗಬೇಕು, ಆದರೆ ಇವರು ಕಿರಾಣಿ ಅಂಗಡಿಗಳೆಲ್ಲಾ ಸಿಗುವಂತೆ ಮಾಡಿದ್ದಾರೆ ಎಂದು ಗುಡುಗಿರು.

ಮೊನ್ನೆ ಹೊಸವರ್ಷದಿನ ಕುಡಿದು ಬಿದ್ದೋರೆಲ್ಲರನ್ನೂ ವಾಹನ ಮಾಡಿಕೊಂಡು ಬಿಡ್ತಿವಿ ಎಂರ?ಯಾರು, ಗಾಂಧಿ ಸ್ವದೇಶಿಗೆ ಒತ್ತುಕೊಟ್ಟರೆ, ಇವರ ನಾಯಕತ್ವನೇ ವಿದೇಶಿ, ಗಾಂಧಿ ಪ್ರಾಮಾಣಿಕತೆಯ ಪ್ರತಿರೂಪವಾದರೆ ಇವತ್ತಿನ ಕಾಂಗ್ರೆಸ್ ಭ್ರಷ್ಟಾಚಾರದ ಪ್ರತಿರೂಪವಾಗಿ ಬದಲಾಗಿದೆ, ಗಾಂಧಿ ತತ್ವಕ್ಕೆ ಗುಂಡೊಡೆದವರು ಈಗಿಗ ಕಾಂಗ್ರೆಸ್‌ನವರು ಎಂದು ಎಚ್ಚರಿಸಿದರು.

ಕಾರ್ಯಕ್ರಮದಲ್ಲಿ ಬಿಜೆಪಿ ಮುಖಂಡ ಎಚ್.ಆರ್.ಅರವಿಂದ್, ಡಾ.ಸದಾನಂದ, ಚಂದಗಾಲು ಶಿವಣ್ಣ, ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್, ವಿವೇಕ್, ಇಂಡವಾಳು ಸಚ್ಚಿದಾನಂದ, ಕೇಶವ್, ಸಿ.ಟಿ.ಮಂಜುನಾಥ್, ಒಬಿಸಿ ಆನಂದ್, ನಾಗನಂದ, ವೈರಮುಡಿ ಮತ್ತಿತರರಿದ್ದರು.

ಮೈಸೂರುನಿಂದ ಬೆಂಗಳೂರಿಗೆ ಮಂಡ್ಯ ಹೆದ್ದಾರಿ ಮಾರ್ಗವಾಗಿ ತೆರಳುತ್ತಿದ್ದಾಗ ನಗರದ ಸ್ವರ್ಣಸಂದ್ರ ಬಡಾವಣೆಯಲ್ಲಿ ಜಿಲ್ಲಾ ಬಿಜೆಪಿ ಮುಖಂಡ ಎಚ್.ಆರ್.ಅರವಿಂದ್ ಮತ್ತು ಜಿಲ್ಲಾ ಬಿಜೆಪಿ ಪದಾಧಿಕಾರಿಗಳಿಂದ ಮಾಜಿ ಸಚಿವ ಸಿ.ಟಿ.ರವಿ ಅಭಿನಂದನೆ ಸ್ವೀಕರಿಸಿದರು.

# ಲಿಂಗಾಂಬುದಿಕೆರೆಗೆ ಸಮಸ್ಯೆ ಇತ್ಯರ್ಥಕ್ಕೆ ಡಿಸಿ ನೇತೃತ್ವದ ಸಭೆ: ಶಾಸಕ ಜಿಟಿಡಿ

**ಮೈಸೂರು:** ಹಲವು ತಿಂಗಳುಗಳಿಂದ ಒಳಚರಂಡಿ ನೀರು ಹರಿಯುವ ಜತೆಗೆ, ರಾಜಕಾಲುವೆಗಳಲ್ಲಿ ಮಳೆ ನೀರು ಸರಾಗವಾಗಿ ಹರಿದುಹೋಗಲಾಗದ ಸನ್ನಿವೇಶ ನಿರ್ಮಾಣವಾಗಿ ದುರ್ವಾಸನೆ ಮತ್ತಿತರ ಸಮಸ್ಯೆಗಳಿಗೆ ಶಾಶ್ವತ ಪರಿಹಾರಕ್ಕೆ ಶೀಘ್ರ ಜಿಲ್ಲಾಧಿಕಾರಿಗಳ ಜತೆ ಸಭೆ ನಡೆಸಲು ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು.

ನಗರದ ದಟ್ಟಗಳ್ಳಿ ಕನಕದಾಸನಗರ ಎರಡನೇ ಹಂತದ ಕೌಟಿಲ್ಯ ಶಾಲೆಯ ಮಾರ್ಗದಲ್ಲಿ ಹರಿದು ಹೋಗುವ ಒಳಚರಂಡಿ ತಾಜ್ಯ ನೀರು, ಲಿಂಗಾಂಬುದಿಕೆರೆಗೆ ರಾಜಕಾಲುವೆ ಮೂಲಕ ಹರಿದು ಹೋಗುವ ಮಲೀನ ನೀರನ್ನು ತಡೆಯುವ ಕುರಿತಾಗಿ ಬುಧವಾರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಈ ಸಮಸ್ಯೆಗೆ ಪರಿಹಾರ ಕಲ್ಪಿಸಲು ಶೀಘ್ರದಲ್ಲೇ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸುವ ಜತೆಗೆ, ಕಾಮಗಾರಿಗೆ ಬೇಕಾಗಿರುವ ಅನುದಾನದ ಕುರಿತು ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸುವಂತೆ ಸೂಚಿಸಿದರು. ರಾಜಕಾಲುವೆಯಲ್ಲಿ ಮಳೆ ನೀರು ಹರಿದುಹೋಗುವಂತೆ ಮಾಡಿದರೆ ಕೆರೆಗೆ ಸಮಸ್ಯೆ ಇರುವುದಿಲ್ಲ. ಕೆಲವು ಕಡೆ ಯುಜಿಡಿ ನೀರು ಹರಿಯುತ್ತಿರುವುದರಿಂದ ಸಮಸ್ಯೆಯಾಗಿದೆ. ತಕ್ಷಣವೇ ಕ್ರಿಯಾಯೋಜನೆ ರೂಪಿಸಬೇಕು. ತಾತ್ಕಾಲಿಕ ಮತ್ತು ಶಾಶ್ವತವಾಗಿ ಆಗಬೇಕಿರುವ ಕೆಲಸಗಳ ಬಗ್ಗೆ ಪಟ್ಟಿ ಮಾಡಿ ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸಬೇಕು.ಶೀಘ್ರದಲ್ಲೇ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಗರಪಾಲಿಕೆ, ಎಂಡಿಎ,ಅರಣ್ಯ ಇಲಾಖೆ ಮೊದಲಾದ ಇಲಾಖೆಗಳ ಅಧಿಕಾರಿಗಳ ಸಭೆ ನಡೆಸಿ ಪರಿಹಾರ ಕಲ್ಪಿಸಲಾಗುವುದು ಎಂದರು. ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಮಾತನಾಡಿ, ಲಿಂಗಾಂಬುದಿಕೆರೆಗೆ ಕಲುಷಿತ ನೀರು ಸೇರದಂತೆ ಕಾಮಗಾರಿ ಆರಂಭಿಸಲಾಗುವುದು. ಎಲ್ಲೆಲ್ಲಿ ಹೊಸದಾಗಿ ಪೈಪ್‌ಲೈನ್ ಅಳವಡಿಸಬೇಕು. ರಿಟೈನಿಂಗ್ ವಾಲ್ ಹಾಕಬೇಕು ಎಂಬುದರ ಬಗ್ಗೆ ಮಾಹಿತಿ ಪಡೆದು ತಕ್ಷಣವೇ ಕ್ರಮಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಸ್ಥಳೀಯರಾದ ಎಂ.ಎನ್.ನಟರಾಜು, ನಾಗೇಂದ್ರ ಸೇರಿ ಸ್ಥಳೀಯ ಸಮಸ್ಯೆಗಳ ಬಗ್ಗೆ ಶಾಸಕರ ಬಳಿ ದೂರಿದರು. ಶೀಘ್ರ ಸಮಸ್ಯೆಗಳ ಇತ್ಯರ್ಥಗೊಳಿಸುವುದಾಗಿ ಶಾಸಕರು ಭರವಸೆ ನೀಡಿದರು. ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಅಸಿಫ್, ಎಸಿಎಫ್ ರವೀಂದ್ರ, ಅಧೀಕ್ಷಕ ಅಭಿಯಂತರರಾದ ಮಂಜುನಾಥ್, ವಲಯ ಮೂರರ ಅಭಿವೃದ್ಧಿ ಅಧಿಕಾರಿ ಸತ್ಯಮೂರ್ತಿ ಅವರೊಂದಿಗೆ ಭೇಟಿ ನೀಡಿ ಸ್ಥಳೀಯ ನಿವಾಸಿಗಳೊಂದಿಗೆ ಹಲವಾರು ಪ್ರದೇಶಗಳಿಗೆ ಭೇಟಿ ನೀಡಿದರು.



# ದೈನಂದಿನ ವ್ಯಾಯಾಮ....

## ಮನೋ ದೈಹಿಕ ಆರೋಗ್ಯದ ಪ್ರಗತಿಯ ಸಂಕೇತ





| ವೀಣಾ ಹೇಮಂತ್‌ಗೌಡ ಪಾಟೀಲ್

ಪ್ರತಿದಿನ ನಿಯಮಿತವಾಗಿ ವ್ಯಾಯಾಮವನ್ನು ಮಾಡುವುದು ದೇಹಕ್ಕೆ ಶಕ್ತಿ, ಬಲ, ಹಾಗೂ ಸಾಮರ್ಥ್ಯವನ್ನು ಮತ್ತು ಮನಸ್ಸಿಗೆ ಶಾಂತಿ ನೆಮ್ಮದಿ ಸಮಾಧಾನ ಹಾಗೂ ಸ್ಥಿರತೆಯನ್ನು ಅತ್ಯುತ್ತಮ ಲಾಭವನ್ನು ತಂದುಕೊಡುತ್ತದೆ. ದೈಹಿಕ ಆರೋಗ್ಯ ಹಾಗೂ ಮಾನಸಿಕ ಸ್ಥಿರತೆಯ ಉದ್ದೇಶದಿಂದ ನಾವು ಮಾಡುವ ವ್ಯಾಯಾಮ ನಮಗೆ ಸಾಕಷ್ಟು ಲಾಭಗಳನ್ನು ತಂದುಕೊಡುತ್ತದೆ.... ಮೂಲಭೂತವಾಗಿ ನಮಗೆ ವ್ಯಾಯಾಮ ಮಾಡುವುದರಿಂದ ಉಂಟಾಗುವ ಅನುಕೂಲತೆಗಳ ಪಟ್ಟಿಯನ್ನು ನೋಡೋಣ

- ರೋಗ ನಿಯಂತ್ರಕವಾಗಿ.... ನಿಯಮಿತವಾಗಿ ವ್ಯಾಯಾಮ ಮಾಡುವುದರಿಂದ ವಿಪರೀತ ದೈಹಿಕ ಆರೋಗ್ಯವನ್ನು ಕೆಡಿಸುವ ಕಾಯಿಲೆಗಳಿಂದ ದೂರವಿರಬಹುದು. ಹೃದ್ರೋಗ, ಪಾರ್ಶ್ವ ವಾಯು, ಟೈಪ್ ಟು ಡಯಾಬಿಟಿಸ್ ಹಾಗೂ ಹಲವಾರು ವಿಧದ ಕ್ಯಾನ್ಸರ್ ಕಾಯಿಲೆಗಳಿಂದ ರಕ್ಷಿಸುತ್ತದೆ.
- ತೂಕ ನಿರ್ವಹಣೆಯಲ್ಲೂ ಕೂಡ ನಿಗದಿತ ವ್ಯಾಯಾಮ ಪ್ರಮುಖ ಪಾತ್ರವನ್ನು ವಹಿಸುತ್ತದೆ.. ವ್ಯಾಯಾಮವು ದೇಹದ ಚಯಾಪಚಯ ಕ್ರಿಯೆಯನ್ನು ಹೆಚ್ಚಿಸುವ ಜೊತೆಗೆ ಹೆಚ್ಚಿನ ಕ್ಯಾಲೋರಿಗಳನ್ನು ಸುಟ್ಟು ಹಾಕುತ್ತದೆ.
- ಮಾನಸಿಕ ಆರೋಗ್ಯ ಹೆಚ್ಚುತ್ತದೆ. ಮನಸ್ಸನ್ನು ಉಲ್ಲಸಿತಗೊಳಿಸುವ ವ್ಯಾಯಾಮವು ಒತ್ತಡವನ್ನು ಕಡಿಮೆ ಮಾಡುತ್ತದೆ. ಅಶಾಂತಿಯನ್ನು ದೂರವಿರಿಸುತ್ತದೆ. ವ್ಯಾಯಾಮ ಮಾಡುವಾಗ ಬಿಡುಗಡೆಯಾಗುವ ಉತ್ತಮ ಹಾರ್ಮೋನ್ ಗಳು ಖಿನ್ನತೆಯನ್ನು ದೂರ ಮಾಡುತ್ತವೆ.
- ಸಾಮರ್ಥ್ಯ ಮತ್ತು ಎಲುಬುಗಳ ಆರೋಗ್ಯ.... ಸ್ನಾಯುಗಳಲ್ಲಿ ಬಲವನ್ನು ತುಂಬುತ್ತದೆ. ಎಲುಬುಗಳಲ್ಲಿನ ಸಾಂದ್ರತೆ ಹೆಚ್ಚಾಗಿ ಅವು ಗಟ್ಟಿಗೊಳ್ಳುತ್ತವೆ.... ಇದರಿಂದ ಮೂಳೆ ಸವೆತದಂತಹ ತೊಂದರೆಗಳು ದೂರವಾಗುತ್ತವೆ..
- ದೈನಂದಿನ ವ್ಯಾಯಾಮವು ಮೆದುಳಿನ ಕಾರ್ಯ ಚಟುವಟಿಕೆಯನ್ನು, ತನ್ಮೂಲಕ ನೆನಪಿನ ಶಕ್ತಿಯನ್ನು ಹೆಚ್ಚಿಸುತ್ತದೆ... ಯೋಚನಾ ಶಕ್ತಿಯನ್ನು ವೃದ್ಧಿಸುವ ಜೊತೆ ಜೊತೆಗೆ ಗ್ರಹಿಕೆಯ ಶಕ್ತಿಯು ಕುಂದದೆ ಇರುವಂತೆ ಕಾರ್ಯನಿರ್ವಹಿಸುತ್ತದೆ.
- ನಿಯಮಿತ ವ್ಯಾಯಾಮದಿಂದ ಒಳ್ಳೆಯ ನಿದ್ರೆಯನ್ನು ನಾವು ಪಡೆಯಬಹುದು. ಅತ್ಯುತ್ತಮವಾದ ದೈಹಿಕ ವ್ಯಾಯಾಮವು ಪದೇ ಪದೇ ಎಚ್ಚರವಾಗದ ನಿದ್ರೆಗೆ ದಾರಿಯಾಗುತ್ತದೆ. ನಿದ್ರೆಯ ಗುಣಮಟ್ಟವನ್ನು ಹೆಚ್ಚಿಸುವ ಜೊತೆಗೆ ನಿದ್ರಾಹೀನತೆಯ ತೊಂದರೆಯನ್ನು ನಿವಾರಿಸುತ್ತದೆ
- ದೇಹದಲ್ಲಿ ಶಕ್ತಿ ಸಂಚಯವಾಗುತ್ತದೆ ಹಾಗೂ ದೇಹವು ಬಲಿಷ್ಠವಾಗುವ ಮೂಲಕ ದೈಹಿಕ ಸಾಮರ್ಥ್ಯವು ಹೆಚ್ಚುತ್ತದೆ ಹೃದಯದ ಸ್ನಾಯುಗಳು ಬಲಗೊಳ್ಳುತ್ತವೆ.

ಬಹಳಷ್ಟು ಬಾರಿ ನಮಗೆ ಯಾವ ವ್ಯಾಯಾಮಗಳನ್ನು ಎಷ್ಟು ಸಮಯದವರೆಗೆ ಮಾಡಬೇಕು ಎಂಬುದರ ಅರಿವು ಇರುವುದಿಲ್ಲ. ಯಾವುದೋ ಒಂದೆರಡು ವ್ಯಾಯಾಮಗಳು ಶೀಘ್ರ ತೂಕವನ್ನು ಇಳಿಸುತ್ತದೆ ಎಂದು ಅದೇ ವ್ಯಾಯಾಮಗಳನ್ನು ಮಾಡುವುದು ಕೂಡ ತಪ್ಪು. ಆ ರೀತಿ ತಪ್ಪು ಮಾಡದೆ ಇರಲು ವ್ಯಾಯಾಮದ ಕೆಲ ನಿಯಮಗಳನ್ನು ಅರಿತುಕೊಳ್ಳಬೇಕು.

- ಏರೋಬಿಕ್ ಚಟುವಟಿಕೆ...... ವಾರಕ್ಕೆ ಕನಿಷ್ಠ 150 ನಿಮಿಷಗಳ ಮಧ್ಯಮದಿಂದ ಅತಿ ಬಿರುಸಿನ ನಡಿಗೆಯನ್ನು ಕೈಗೊಳ್ಳಿ. ಹಾಗೂ ಓಡುವುದಾದರೆ ವಾರಕ್ಕೆ ಸುಮಾರು 75 ನಿಮಿಷಗಳ ಓಟದ ಚಟುವಟಿಕೆಯನ್ನು ಕೈಗೊಳ್ಳಿ.
- ಸ್ಟ್ರೆಂತ್ ಟ್ರೈನಿಂಗ್.... ಸ್ನಾಯುಗಳ ಬಲವರ್ಧನೆಗೆ ಮಾಡುವ ವ್ಯಾಯಾಮಗಳು ವಾರದಲ್ಲಿ 2 ರಿಂದ 3 ದಿನ ದಿನ ಮಾಡಿದರೆ ಸಾಕು.
- ದೇಹದ ನಮ್ಯತೆ ಮತ್ತು ಸಮತೋಲನವನ್ನು ಕಾಯ್ದುಕೊಳ್ಳಲು ಮಾಡುವ ಸ್ಟ್ರೆಚಿಂಗ್ ವ್ಯಾಯಾಮಗಳು ದೇಹದಲ್ಲಿ ಚಲನಶೀಲತೆಯನ್ನು ಉಂಟುಮಾಡುತ್ತದೆ. ಹಾಗೂ ಸಮತೋಲನವನ್ನು ಕಾಯ್ದುಕೊಳ್ಳುವಂತೆ ಮಾಡುವ ಮೂಲಕ ಜೋಲಿ ತಪ್ಪುವ, ಬೀಳುವ ತೊಂದರೆಗಳಿಂದ ತಪ್ಪಿಸುತ್ತವೆ. ಯೋಗ ಮತ್ತು ತಾಯ್ ಚಿಯಂತಹ ವ್ಯಾಯಾಮಗಳು ಲಾಭದಾಯಕ.

ಎಲ್ಲಕ್ಕಿಂತ ಮುಖ್ಯವಾಗಿ ಪ್ರತಿದಿನ ವ್ಯಾಯಾಮ ನಡುಗೆಗಳನ್ನು ಮಾಡುವುದರಿಂದ ದೇಹಕ್ಕೆ ಹಾಗೂ ಮನಸ್ಸಿಗೆ ಸ್ಥಿರತೆ ದೊರೆಯುತ್ತದೆ. ಯಾವಾಗಲೋ ಒಮ್ಮೆ ದೀರ್ಘಕಾಲದವರೆಗೆ ವ್ಯಾಯಾಮಗಳನ್ನು ಮಾಡುವುದಕ್ಕಿಂತ ಪ್ರತಿದಿನ ಕನಿಷ್ಠ ಐದು ನಿಮಿಷಗಳ ವಾಕಿಂಗ್ ಮತ್ತು 10 ರಿಂದ 15 ನಿಮಿಷಗಳ ವ್ಯಾಯಾಮ ಮಾಡುವುದು ಸೂಕ್ತ.

ವ್ಯಾಯಾಮ ಮಾಡುವುದಕ್ಕೆ ನಿಯಮಗಳು ಇರುವಂತೆಯೇ ಏನು ಮಾಡಬಾರದು ಎಂಬುದಕ್ಕೂ ಕೂಡ ಕೆಲವು ನಿಯಮಗಳಿವೆ.

ವ್ಯಾಯಾಮದಿಂದ ಹೆಚ್ಚಿನ ಲಾಭ ಮತ್ತು ತೊಂದರೆಗಳನ್ನು ಕಡಿಮೆಗೊಳಿಸಿಕೊಳ್ಳಲು ಇಂಗ್ಲೀಷ್ ವರ್ಣಮಾಲೆಯ ನಾಲ್ಕು ಖ ಗಳ ಚೌಕಟ್ಟು ಬೇಕೇ ಬೇಕು. ರೀ ಹೈಡ್ರೇಶನ್.... ವ್ಯಾಯಾಮ ಮಾಡುವಾಗ ದೇಹವು ಕಳೆದುಕೊಂಡ ನೀರಿನ ಅಂಶವನ್ನು ತುಂಬಲು ಸಾಕಷ್ಟು ಪ್ರಮಾಣದ ಎಲೆಕ್ಟ್ರೋಲೈಟ್ಗಳನ್ನು ಹೊಂದಿರುವ ನೀರನ್ನು ಹಾಗೂ ದ್ರವ ಆಹಾರವನ್ನು ಸೇವಿಸಬೇಕು. ರೀಫ್ಯುಯಲ್.... ಪಿಷ್ಟ ಪದಾರ್ಥವನ್ನು ಸೇವಿಸುವ ಮೂಲಕ ದೇಹವು ಈಗಾಗಲೇ ಕಳೆದುಕೊಂಡಿರುವ ಸ್ನಾಯುಗಳಲ್ಲಿನ ಗ್ಲುಕೋಸ್ (ಮಸಲ್ ಗ್ಲೈಕೋಜನ್) ಪ್ರಮಾಣವನ್ನು ಮರು ಪೂರಣ ಮಾಡಿಕೊಳ್ಳಬೇಕು

ರಿಪೇರ್...ಅತ್ಯುತ್ತಮ ಗುಣಮಟ್ಟದ ಪ್ರೊಟೀನ್ ಗಳನ್ನು ಸೇವಿಸಬೇಕು ಆ ಮೂಲಕ ಸ್ನಾಯುಗಳ ಬಲವರ್ಧನೆಯನ್ನು ಮಾಡಿಕೊಳ್ಳಬೇಕು ಹಾಗೂ ಅಂತಿಮವಾಗಿ

ರೆಸ್ಟ್..... ಎಲ್ಲ ವ್ಯಾಯಾಮಗಳಿಗೆ ಮೂಲವಾಗಿ ವಿಶ್ರಾಂತಿಯ ಅವಶ್ಯಕತೆ ಇರುತ್ತದೆ. ದೇಹದ ಎಲ್ಲಾ ಅಂಗಗಳು ಮತ್ತೆ ಕಾರ್ಯನಿರ್ವಹಿಸಲು ಅನುವಾಗುವಂತೆ ಕಡ್ಡಾಯವಾಗಿ ವಿಶ್ರಾಂತಿಯನ್ನು ಪಡೆಯಲೇಬೇಕು ಉತ್ತಮ ಗುಣಮಟ್ಟದ ನಿದ್ರೆ ಮಾಡುವ ಮೂಲಕ ವಿಶ್ರಾಂತಿ ದೊರೆಯುತ್ತದೆ.

ಕೆಲವೊಮ್ಮೆ ಇಡೀ ದಿನದ ಒತ್ತಡವನ್ನು ಸಹಿಸಲು ಮಧ್ಯಾಹ್ನ 3 ರಿಂದ 5 ನಿಮಿಷಗಳ ಪವರ್ ನ್ಯಾಪ್ ತೆಗೆದುಕೊಳ್ಳುವುದು ಕೂಡ ಅತ್ಯವಶ್ಯಕವಾದ ವಿಶ್ರಾಂತಿ ಆಗಿರುತ್ತದೆ.

ವ್ಯಾಯಾಮವನ್ನು ಯಶಸ್ವಿಯಾಗಿ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಕೆಲ ಸಲಹೆಗಳು ಇಂತಿವೆ

- ಈಗಾಗಲೇ ಸ್ಲೋ ಅಂಡ್ ಸ್ಟಡಿ ವಿನ್ಸ್ ದ ರೇಸ್ ಎಂಬ ಮೊಲ ಮತ್ತು ಆಮೆಯ ಕಥೆ ನಮಗೆ ಗೊತ್ತಿದೆ.
- ಇದನ್ನೇ ನಾವು ವ್ಯಾಯಾಮಕ್ಕೆ ಅನ್ವಯಿಸಬಹುದು.
- ಇದುವರೆಗೂ ನೀವು ಬದುಕಿನಲ್ಲಿ ವ್ಯಾಯಾಮವನ್ನೇ ಮಾಡಿಲ್ಲ ಎಂತಾದರೆ ಇದೀಗ ಸರಿಯಾದ ಸಮಯ.
- ಹಗುರವಾದ ಆದರೆ ಅತ್ಯಂತ ಕಡಿಮೆ ಅವಧಿಯ
- ವ್ಯಾಯಾಮಗಳನ್ನು ನಿಧಾನವಾಗಿ ಮಾಡುತ್ತಾ ನಂತರ ಅದರ ತೀವ್ರತೆಯನ್ನು ಹೆಚ್ಚಿಸಿಕೊಳ್ಳಬಹುದು.

ಮಿಶ್ರ ವ್ಯಾಯಾಮಗಳನ್ನು ಮಾಡುವುದು... ಕೆಲವರಿಗೆ ಪ್ರತಿದಿನ ಒಂದೇ ರೀತಿಯ ಅಥವಾ ಒಂದೇ ಶೈಲಿಯ ವ್ಯಾಯಾಮಗಳನ್ನು ಮಾಡುವುದು ಬೇಸರ ತರಿಸಬಹುದು ಅಂತಹವರು ನಡಿಗೆ, ಈಜು, ಸೈಕ್ಲಿಂಗ್ ಮತ್ತು ನೃತ್ಯದಂತಹ ಚಟುವಟಿಕೆಗಳನ್ನು ತಮ್ಮ ದೈನಂದಿನ ಬದುಕಿನಲ್ಲಿ ಅಳವಡಿಸಿಕೊಳ್ಳಬಹುದು. ಈ ರೀತಿ ವ್ಯಾಯಾಮದಲ್ಲಿ ಮಾಡಿಕೊಳ್ಳುವ ಬದಲಾವಣೆಗಳು ಬೇಸರ ಹುಟ್ಟಿಸುವುದಿಲ್ಲ ಹಾಗೂ ಯಾವುದೇ ರೀತಿಯ ದೈಹಿಕ ತೊಂದರೆಗಳು ಉಂಟಾಗದಂತೆ ಕಾಯ್ದುಕೊಳ್ಳಲು ಅನುಕೂಲ

ಸ್ನೇಹಿತರೆ, ನಾವೇನು ನೂರು ವರ್ಷ ಬದುಕುತ್ತೀವಾ?

ಇರುವಷ್ಟು ದಿನ ಉಂಡು ತಿಂದು ಹಾಯಾಗಿ ಇದ್ದರೆ ಆಯ್ತು ಎಂಬ ಭಾವ ನಿಮ್ಮದಾದರೆ ಕೊಂಚ ನನ್ನ ಮಾತನ್ನು ಕಿವಿಗೊಟ್ಟು ಕೇಳಿ. ಬದುಕಿರುವ ಕೆಲವೇ ವರ್ಷಗಳನ್ನಾದರೂ ಚಟುವಟಿಕೆಯಿಂದ ಬದುಕಿದರೆ ರೋಗರುಜಿನಗಳಿಂದ ದೂರವಾದ, ಅನವಶ್ಯಕ ಬೊಜ್ಜನ್ನು ಹೊತ್ತು ತಿರುಗದ, ಮಾನಸಿಕ ತೊಂದರೆಗಳಿಂದ ಬಳಲದ ಬದುಕು ನಮ್ಮದಾಗುತ್ತದೆ.

ಬಹಳಷ್ಟು ಬಾರಿ ನಮ್ಮನ್ನು ಕಟ್ಟಿ ಹಾಕುವುದು ನಮ್ಮ ಜೀವನ ಶೈಲಿ. ಉಳಿದೆಲ್ಲ ವಿಷಯಗಳಿಗೆ ನಾವು ಸಮಯವನ್ನು ನೀಡುತ್ತೇವೆ ಆದರೆ ವ್ಯಾಯಾಮದ ವಿಷಯ ಬಂದಾಗ ಟೈಮೇ ಇಲ್ಲ ಸಮಯವೇ ಸಾಲುವುದಿಲ್ಲ, ನೋಡುತ್ತೀರಲ್ಲ ನಮ್ಮ ಬಿಜಿ ಲೈಫ್ ಎಂದೆಲ್ಲಾ ಹೇಳುತ್ತೇವೆ....ಆದರೆ ಒಂದೊಮ್ಮೆ ಕಾಯಿಲೆಗಳು ವಕ್ಕರಿಸಿದಾಗ ಒಮ್ಮಿಂದೊಮ್ಮೆಲೆ ಉಂಟಾಗುವ ತಡೆಗಿಂತ ಪ್ರತಿದಿನ ಕನಿಷ್ಠ ಅರ್ಧ ಗಂಟೆ ಸಮಯವನ್ನು ವ್ಯಾಯಾಮ ನಡಿಗೆಗಳಿಗೆ ಮೀಸಲಾಗಿದ್ದರೆ ದೈಹಿಕ ತೊಂದರೆಗಳಿಂದ ದೂರವಾಗಬಹುದು.

ಊಟವಾದ ನಂತರ ಕೆಲವು ನಿಮಿಷಗಳ ನಡೆದಾಟ, ಲಿಫ್ಟ್ ಬಳಸುವ ಬದಲು ಮೆಟ್ಟಿಲುಗಳನ್ನು ಬಳಸುವುದು, ಮನೆಯ ಎಲ್ಲಾ ಕೆಲಸ ಕಾರ್ಯಗಳನ್ನು ಹಂಚಿಕೊಂಡು ಮಾಡುವುದು ಹೀಗೆ ಹತ್ತು ಹಲವು ಕೆಲಸಗಳನ್ನು ಮಾಡುವ ಮೂಲಕ ಸದಾ ಚಟುವಟಿಕೆಯಿಂದ ಇರುವುದು ನಮಗೆ ನಾವು ಮಾಡಿಕೊಳ್ಳುವ ಬಹುದೊಡ್ಡ ಉಪಕಾರ.

ಇಂದಿನ ಆಧುನಿಕ ಜೀವನ ಶೈಲಿಯಲ್ಲಿ ಕಣ್ಣಿಗೆ ಕಂಡದ್ದನ್ನೆಲ್ಲ ತಿನ್ನುವ ನಾವು ದಿನಚರಿ ಹಾಗೂ ಋತುಚರ್ಯಗಳಿಗೆ ಹೊಂದಿಕೊಂಡಿರದೆ ಹೋದರೆ ಆಗುವ ಪರಿಣಾಮಗಳನ್ನು ಖಂಡಿತವಾಗಿಯೂ ಎದುರಿಸಬೇಕು.

ಉಗುರಿನಿಂದ ಹೋಗುವುದಕ್ಕೆ ಕೊಡಲಿ ಏಕೆ ಬೇಕು ಎಂಬ ಮಾತು ಕೇಳಿದ್ದೀರಲ್ಲವೇ ?

ದೈನಂದಿನ ವ್ಯಾಯಾಮ ನಮ್ಮ ದೇಹಕ್ಕೆ ಆಮ್ಲಜನಕದಂತೆ ಕಾರ್ಯನಿರ್ವಹಿಸಿದರೆ ಬದುಕು ಬಂಗಾರವಾಗುತ್ತದೆ. ಉತ್ತಮವಾದ ಬದುಕನ್ನು ನಿರ್ವಹಿಸಲು ವ್ಯಾಯಾಮ ಮತ್ತು ನಡಿಗೆಗಳನ್ನು ನಿಮ್ಮ ಬದುಕಿನ ಭಾಗವನ್ನಾಗಿಸಿ...... ಯೋಚಿಸಿ, ಯೋಜಿಸಿ ಹಾಗೂ ಅಳವಡಿಸಿಕೊಳ್ಳಿ.

# ಭಾರತದ ವಿಮಾನ ದುರಂತಗಳ ಕರಾಳ ಇತಿಹಾಸ



ಇಂದು ಮಹಾರಾಷ್ಟ್ರದ ಪ್ರಬಲ ರಾಜಕೀಯ ನಾಯಕ, ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರ ಅಕಾಲಿಕ ನಿಧನವು ಇಡೀ ದೇಶವನ್ನು ಬೆಚ್ಚಿಬೀಳಿಸಿದೆ. ಬಾರಾಮತಿಯಲ್ಲಿ ನಡೆದ ವಿಮಾನ ಅಪಘಾತದಲ್ಲಿ ಅಜಿತ್ ಪವಾರ್ ಸೇರಿದಂತೆ ಐವರು ಬಲಿಯಾದ ಸುದ್ದಿ, ವಾಯುಮಾರ್ಗದಲ್ಲಿ ನಾವು ಕಳೆದುಕೊಂಡ ಧೀಮಂತ ವ್ಯಕ್ತಿಗಳ ನೆನಪನ್ನು ಮರುಕಳಿಸುವಂತೆ ಮಾಡಿದೆ.

ಈ ಹಿನ್ನೆಲೆಯಲ್ಲಿ, ಭಾರತದ ಇತಿಹಾಸದಲ್ಲಿ ಸಂಭವಿಸಿದ ಪ್ರಮುಖ ವಾಯು ಅಪಘಾತಗಳನ್ನು ಮತ್ತು ಅದರಲ್ಲಿ ಮರೆಯಾದ ಗಣ್ಯರನ್ನು ಇಲ್ಲಿ ನೆನೆಪಿಸಿಕೊಳ್ಳೋಣ .

**1. ವಿಮಾನ ಯಾನ ಇತಿಹಾಸದ ಕರಾಳ ಪುಟಗಳು:**

* ಹೋಮಿ ಜಹಾಂಗೀರ್ ಬಾಬಾ (ಜನವರಿ 24, 1966): ಭಾರತದ ಅಣುಶಕ್ತಿ ವಿಜ್ಞಾನದ ಪಿತಾಮಹ, ಆಲ್ಪ್ಸ್ ಪರ್ವತ ಶ್ರೇಣಿಯ ಮೌಂಟ್ ಬ್ಲಾಂಕ್ ಬಳಿ ಏರ್ ಇಂಡಿಯಾ ವಿಮಾನ ಪತನಗೊಂಡಾಗ ಮೃತರಾದರು.
* ಏರ್ ಇಂಡಿಯಾ ಫ್ಲೈಟ್ 171 (ಅಕ್ಟೋಬರ್ 12, 1976): ಮುಂಬೈನಿಂದ ಹೊರಟಿದ್ದ ಈ ವಿಮಾನವು ತಾಂತ್ರಿಕ ದೋಷದಿಂದಾಗಿ ಲ್ಯಾಂಡಿಂಗ್ ವೇಳೆ ಅಪಘಾತಕ್ಕೀಡಾಯಿತು. ಈ ಭೀಕರ ದುರಂತದಲ್ಲಿ ವಿಮಾನದಲ್ಲಿದ್ದ ಎಲ್ಲಾ 95 ಜನರು ಸಾವನ್ನಪ್ಪಿದರು.
* ಸಂಜಯ್ ಗಾಂಧಿ (ಜೂನ್ 23, 1980): ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರ ಪುತ್ರ ಸಂಜಯ್ ಗಾಂಧಿ, ದೆಹಲಿಯ ಸಫ್ದರ್‌ಜಂಗ್ ವಿಮಾನ ನಿಲ್ದಾಣದ ಬಳಿ ಲಘು ವಿಮಾನ ಅಪಘಾತದಲ್ಲಿ ಮೃತರಾದರು.
* ಮಾಧವರಾವ್ ಸಿಂಧಿಯಾ (ಸೆಪ್ಟೆಂಬರ್ 30, 2001): ಕಾಂಗ್ರೆಸ್‌ನ ಪ್ರಭಾವಿ ನಾಯಕ, ಉತ್ತರ ಪ್ರದೇಶದ ಮೈನ್‌ಪುರಿಯಲ್ಲಿ ಸಂಭವಿಸಿದ ವಿಮಾನ ಅಪಘಾತದಲ್ಲಿ ನಿಧನರಾದರು.





* ಜಿ.ಎಂ.ಸಿ ಬಾಲಯೋಗಿ (ಮಾರ್ಚ್ 3, 2002): ಲೋಕಸಭೆಯ ಮಾಜಿ ಸ್ಪೀಕರ್, ಆಂಧ್ರಪ್ರದೇಶದಲ್ಲಿ ಹೆಲಿಕಾಪ್ಟರ್ ಅಪಘಾತಕ್ಕೆ ಬಲಿಯಾದರು.
* ಚಿತ್ರ ನಟಿ ಸೌಂದರ್ಯಾ (ಏಪ್ರಿಲ್ 17, 2004): ಕನ್ನಡ ಮತ್ತು ತೆಲುಗು ಚಿತ್ರರಂಗದ ಅಪ್ರತಿಮ ನಟಿ ಸೌಂದರ್ಯಾ, ಬೆಂಗಳೂರಿನ ಜಕ್ಕೂರು ಬಳಿ ಚುನಾವಣಾ ಪ್ರಚಾರಕ್ಕೆ ಹೊರಟಿದ್ದಾಗ ವಿಮಾನ ಪತನದಲ್ಲಿ ಮಡಿದರು.
* ವೈ.ಎಸ್. ರಾಜಶೇಖರ ರೆಡ್ಡಿ (ಸೆಪ್ಟೆಂಬರ್ 2, 2009): ಆಂಧ್ರಪ್ರದೇಶದ ಅಂದಿನ ಮುಖ್ಯಮಂತ್ರಿ ನಲ್ಲಮಲ ಅರಣ್ಯದಲ್ಲಿ ಹೆಲಿಕಾಪ್ಟರ್ ಅಪಘಾತದಲ್ಲಿ ನಿಧನರಾದರು.
* ದೋರ್ಜಿ ಖಂಡು (ಏಪ್ರಿಲ್ 30, 2011): ಅರುಣಾಚಲ ಪ್ರದೇಶದ ಮುಖ್ಯಮಂತ್ರಿಯಾಗಿದ್ದ ಇವರು ಹೆಲಿಕಾಪ್ಟರ್ ಪತನದಲ್ಲಿ ಮಡಿದರು.
* ತರುಣಿ ಸಚ್‌ದೇವ್ (ಮೇ 14, 2012): ಮಲಯಾಳಂ ಬಾಲನಟಿ ತರುಣಿ ನೇಪಾಳದ ವಿಮಾನ ಅಪಘಾತದಲ್ಲಿ ತನ್ನ ಹುಟ್ಟುಹಬ್ಬದಂದೇ ಸಾವನ್ನಪ್ಪಿದರು.

**2. ಕಳೆದ ಒಂದು ದಶಕದ ಕೆಲವು ಪ್ರಮುಖ ಭೀಕರ ಅಪಘಾತಗಳು (2016 – 2026)**

ಕಳೆದ ಹತ್ತು ವರ್ಷಗಳಲ್ಲಿ ಭಾರತೀಯ ವಾಯು ಪ್ರದೇಶದಲ್ಲಿ ಸಂಭವಿಸಿದ ಪ್ರಮುಖ ಅಪಘಾತಗಳ ವಿವರ ಇಲ್ಲಿದೆ:

* ಜೂನ್ 16, 2016 (ಖಂಈ ಂಓ–32): ಅರುಣಾಚಲ ಪ್ರದೇಶದಲ್ಲಿ ವಾಯುಪಡೆಯ ವಿಮಾನ ಪತನಗೊಂಡು 13 ಮಂದಿ ಸೇನಾ ಸಿಬ್ಬಂದಿ ಹುತಾತ್ಮರಾದರು.
* ಜೂನ್ 3, 2019 (ಖಂಈ ಂಓ–32): ಅಸ್ಸಾಂನಿಂದ ಹೊರಟು ಅರುಣಾಚಲದಲ್ಲಿ ಅಪಘಾತಕ್ಕೀಡಾದ ವಿಮಾನದಲ್ಲಿ 13 ಮಂದಿ ಪ್ರಾಣ ಕಳೆದುಕೊಂಡರು.
* ಆಗಸ್ಟ್ 7, 2020 (ಕೋಯಿಕ್ಕೋಡ್ ದುರಂತ): ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನ ರನ್‌ವೇಯಿಂದ ಜಾರಿ ಕಂದಕಕ್ಕೆ ಬಿದ್ದ ಪರಿಣಾಮ 21 ಜನರು ಮೃತಪಟ್ಟರು.
* ಡಿಸೆಂಬರ್ 8, 2021 (ಕೂನೂರು ಪತನ): ದೇಶದ ಮೊದಲ ಸಿಡಿಎಸ್ ಜನರಲ್ ಬಿಪಿನ್ ರಾವತ್ ಸೇರಿದಂತೆ ಒಟ್ಟು 14 ಜನರು ಹುತಾತ್ಮರಾದರು.
* ಜೂನ್ 12, 2025(ಬೋಯಿಂಗ್ 787 ಡ್ರೀಮ್‌ಲೈನರ್): ತಾಂತ್ರಿಕ ವೈಫಲ್ಯದಿಂದ ಈ ಆಧುನಿಕ ವಿಮಾನವು ಪತನಗೊಂಡು ವಿಮಾನದಲ್ಲಿದ್ದ ಎಲ್ಲಾ 158 ಪ್ರಯಾಣಿಕರು ದುರ್ಮರಣಕ್ಕೀಡಾದರು. ಇದು ಜಾಗತಿಕ ಮಟ್ಟದಲ್ಲಿ ದೊಡ್ಡ ಚರ್ಚೆ ಹುಟ್ಟುಹಾಕಿತ್ತು. ಗುಜರಾತಿನ ಮಾಜಿ ಮುಖ್ಯ ಮಂತ್ರಿ ವಿಜಯ ರೂಪಾನಿ ಯವರು ಈ ವಿಮಾನದಲ್ಲಿದ್ದು ಅಪಘಾತದಿಂದ ಸಾವನ್ನಪ್ಪಿದರು. ಜೂನ್ 12, 2025 ರಂದು, ಲಂಡನ್‌ನ ಗ್ಯಾಟ್ವಿಕ್ ವಿಮಾನ ನಿಲ್ದಾಣಕ್ಕೆ ತೆರಳುತ್ತಿದ್ದ ಏರ್ ಇಂಡಿಯಾ ವಿಮಾನ 171 ರಲ್ಲಿ ಸಾವನ್ನಪ್ಪಿದ 241 ಜನರಲ್ಲಿ ಅವರು ಒಬ್ಬರು. ಅಹಮದಾಬಾದ್‌ನ ಸರ್ದಾರ್ ವಲ್ಲಭಭಾಯಿ ಪಟೇಲ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಟೇಕ್ ಆಫ್ ಆದ ಸ್ವಲ್ಪ ಸಮಯದ ನಂತರ, ವಿಮಾನವು ಬಿ.ಜೆ.ಯ ಹಾಸ್ಟೆಲ್ ಬ್ಲಾಕ್‌ಗೆ ಅಪ್ಪಳಿಸಿತು.
* **ಜನವರಿ 28, 2026 (ಬಾರಾಮತಿ ಅಪಘಾತ):** ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಅಜಿತ್ ಪವಾರ್ ಸೇರಿದಂತೆ ಒಟ್ಟು 5 ಜನರು ಸಾವನ್ನಪ್ಪಿದ್ದಾರೆ.

ಬಾರಾಮತಿಯಲ್ಲಿ ನಡೆದ ಅಪಘಾತವು ಅಜಿತ್ ಪವಾರ್ ಅವರಂತಹ ದಕ್ಷ ಆಡಳಿತಗಾರನ ಬದುಕಿಗೆ ಅನಿರೀಕ್ಷಿತ ಅಂತ್ಯ ಹಾಡಿದೆ. ಅವರ ನಿಷ್ಠುರ ಮಾತು ಮತ್ತು ಕಾರ್ಯದಕ್ಷತೆ ಅವರನ್ನು ವಿಶಿಷ್ಟ ನಾಯಕನನ್ನಾಗಿ ಮಾಡಿತ್ತು. ಅವರ ನಿಧನದಿಂದಾಗಿ ಮಹಾರಾಷ್ಟ್ರವು ಒಬ್ಬ ಪ್ರಬಲ ಅಭಿವೃದ್ಧಿ ಪರ ನಾಯಕನನ್ನು ಕಳೆದುಕೊಂಡಿದೆ.

ಈ ವಿಮಾನ ಅಪಘಾತಗಳು ಅದರಿಂದುಟಾಗುವ ಸಾವುಗಳು ವಿಮಾನಯಾನ ಸುರಕ್ಷತೆಯ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎತ್ತಿವೆ. ಅಪಘಾತವಾದಾಗ ಮುಂದಕ್ಕೆ ಬರುವ ಪ್ರಶ್ನೆಗಳು , ಸುರಕ್ಷತೆಯ ಚರ್ಚೆಗಳು ಸ್ವಲ್ಪ ದಿನ ಹೆಡ್ಲೈನ್ ನಲ್ಲಿ ಕಾಣಿಸಿಕೊಂಡು , ಮತ್ತೆ ಮಾಯವಾಗುತ್ತವೆ . ಇದು ದುರ್ದೈವ ಹವಾಮಾನ ವೈಪರೀತ್ಯವಿದ್ದಾಗ ಪ್ರಯಾಣವನ್ನು ಮುಂದೂಡುವ ನಿರ್ಧಾರ ಮತ್ತು ತಾಂತ್ರಿಕ ಲೋಪಗಳನ್ನು ಗುರುತಿಸುವಲ್ಲಿ ನಾವು ಇನ್ನೂ ಹೆಚ್ಚಿನ ಜಾಗರೂಕತೆ ವಹಿಸಬೇಕಿದೆ.



| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email: Swamynathann@gmail.com

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,